ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶುಕ್ರವಾರ, ಮೇ 07, 2021

ಸಂಪುಟ : 47 ಸಂಚಿಕೆ : 354 ☎ 254736 91642 99999 RNI No: 27369/75, KA/SK/CTA-275/2021-2023. O/P @ J.D. Circle P.O. ಪುಟ : 4 ರೂ : 4.00 www.janathavani.com janathavani@mac.com

# ತಡವಾದ ಆಕ್ಸಿಜನ್ : ಜಿಲ್ಲಾಸ್ಪತ್ರೆಯಲ್ಲಿ ಆತಂಕ

## ಡಿಸಿ-ಎಸ್ಪಿ ಸಮಯ ಪ್ರಜ್ಞೆಯಿಂದ ಆಸ್ಪತ್ರೆಯ ಕೋವಿಡ್ ರೋಗಿಗಳ ಜೀವ ರಕ್ಷಣೆ

ದಾವಣಗೆರೆ, ಮೇ 6- ಕೋವಿಡ್ ರೋಗಿಗಳಿಗೆ ಪ್ರತಿ ದಿನ ಆಮ್ಲಜನಕ ಪೂರೈಕೆಯ ಆಕ್ಸಿಜನ್ ತುಂಬಿದ ಟ್ಯಾಂಕರ್ ಬರುವುದು ತಡವಾದ ಹಿನ್ನೆಲೆಯಲ್ಲಿ ಕೆಲಕಾಲ ಜಿಲ್ಲಾಸ್ಪತ್ರೆಯಲ್ಲಿ ಆತಂಕದ ವಾತಾವರಣ ಸೃಷ್ಟಿಯಾಗಿತ್ತು.

ಈ ಬಗ್ಗೆ ಗಮನಕ್ಕೆ ಬರುತ್ತಿದ್ದಂತೆ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರು ಮೊಕ್ಕಾಂ ಹೂಡಿ ಕೋವಿಡ್ ರೋಗಿಗಳಿಗೆ ಆಕ್ಸಿಜನ್ ಕೊರತೆಯಾಗದಂತೆ ಸಮರ್ಥವಾಗಿ ನಿಭಾಯಿಸುವ ಮುಖೇನ ಕೋವಿಡ್ ರೋಗಿಗಳ ಜೀವ ರಕ್ಷಿಸಿ, ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಜಿಲ್ಲಾಧಿಕಾರಿಗಳಿಗೆ ಎಸ್ಪಿ ಹನುಮಂತರಾಯ ಅವರೂ ಸಹ ಸಾಥ್ ನೀಡಿ ಜೀವ ಉಳಿಸುವಲ್ಲಿ ಕಾರಣೀಭೂತರಾದರು.

ನಗರದ ಜಿಲ್ಲಾಸ್ಪತ್ರೆಯಲ್ಲಿ ಕೋವಿಡ್ ರೋಗಿಗಳಿಗೆ ವಿಜಯನಗರ ಜಿಲ್ಲೆಯ ಸಂಡೂರು ತಾಲ್ಲೂಕಿನ ತೋರಣಗಲ್ಲಿನ ಜಿಂದಾಲ್ ಕಂಪನಿಯಿಂದ ಪ್ರತಿ ನಿತ್ಯ 6 ಸಾವಿರ ಲೀಟರ್ ಲಿಕ್ವಿಡ್ ಆಕ್ಸಿಜನ್ ಹೊತ್ತು ಆಕ್ಸಿಜನ್ ಟ್ಯಾಂಕರ್ ಮುಂಜಾನೆ 8.45ಕ್ಕೆ ಗಂಟೆಗೆ ಬರುತ್ತದೆ. ನಂತರ ಜಿಲ್ಲಾಸ್ಪತ್ರೆಯ ಆವರಣದಲ್ಲಿನ 6 ಸಾವಿರ ಲೀಟರ್ ಸಾಮರ್ಥ್ಯವುಳ್ಳ ಸ್ಥಿರ ಟ್ಯಾಂಕರ್ ಗೆ ತುಂಬಿಸಿ ಸೋಂಕಿತ ಆಕ್ಸಿಜನ್ ಅವಲಂಬಿತರಾದ ರೋಗಿಗಳಿಗೆ ಆಕ್ಸಿಜನ್ ಪೂರೈಸಲಾಗುತ್ತಿದೆ. ಆದರೆ ಇಂದು ಅಲ್ಲಿ ಫಿಲ್ಲಿಂಗ್ ಮಾಡಿ ಆಕ್ಸಿಜನ್ ತುಂಬಿದ್ದ ಟ್ಯಾಂಕರ್ ಅನ್ನು ಕಳಿಸಲು ತಡ ಮಾಡಲಾಗಿತ್ತು.



ಜಿಲ್ಲಾಸ್ಪತ್ರೆಯಲ್ಲಿನ ಆಕ್ಸಿಜನ್ ಘಟಕದಲ್ಲಿ ಆಕ್ಸಿಜನ್ ಪ್ರಮಾಣ ಕಡಿಮೆ ಆಗಿದ್ದನ್ನು ಗಮನಿಸಿದ್ದ ಆಸ್ಪತ್ರೆಯ ಅಧಿಕಾರಿಗಳು ತಕ್ಷಣವೇ ವಿಷಯವನ್ನು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರಿಗೆ ಮುಟ್ಟಿಸಿದ್ದಾರೆ. ತಕ್ಷಣವೇ ಕಾರ್ಯ ಪ್ರವೃತ್ತರಾದ ಜಿಲ್ಲಾಧಿಕಾರಿಗಳು ತಕ್ಷಣವೇ ಜಿಂದಾಲ್ ಕಂಪನಿಗೆ ಸಂಪರ್ಕಿಸಿ ಆಮ್ಲಜನಕ ಟ್ಯಾಂಕರ್ ಅನ್ನು ತಕ್ಷಣವೇ ಕಳಿಸುವಂತೆ ಮನವಿ ಮಾಡಿದ್ದಾರೆ.

ಆಕ್ಸಿಜನ್ ಟ್ಯಾಂಕರ್ ಬರುವುದರೊಳಗಾಗಿ ರೋಗಿಗಳಿಗೆ ಆಕ್ಸಿಜನ್ ಪೂರೈಕೆಯಲ್ಲಿ ತೊಂದರೆಯಾಗಬಾರದೆಂದು ಸ್ಥಳೀಯ ಖಾಸಗಿ ಆಸ್ಪತ್ರೆಗಳಿಂದ ಹಾಗೂ (3ನೇ ಪುಟಕ್ಕೆ)

### ಆಕ್ಸಿಜನ್ ಟ್ಯಾಂಕರ್‌ಗೆ ಪೊಲೀಸರ ಬೆಂಗಾವಲು

ದಾವಣಗೆರೆ, ಮೇ 6- ಇನ್ನು ಮುಂದೆ ತಡವಾಗದಂತಿರಲು ಜಿಲ್ಲಾಸ್ಪತ್ರೆಗೆ ಆಕ್ಸಿಜನ್ ತುಂಬಿದ ಟ್ಯಾಂಕರ್ ಅನ್ನು ಪೊಲೀಸರ ಬೆಂಗಾವಲಿನಲ್ಲಿ ತರಿಸುವ ವ್ಯವಸ್ಥೆ ಮಾಡಲಾಗುವುದು ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ತಿಳಿಸಿದರು.

ಆಮ್ಲಜನಕ ತುಂಬಿದ ಟ್ಯಾಂಕರ್ ಬಂದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಮೂರು ಮಹಡಿಗಳಲ್ಲಿ ಇರುವ ರೋಗಿಗಳಿಗೆ ಸಮಯಕ್ಕೆ ಸರಿಯಾಗಿ ಆಮ್ಲಜನಕ ಪೂರೈಕೆ ಮಾಡುವುದು ಸವಾಲಿನ ಕೆಲಸ. ಈ ನಿಟ್ಟಿನಲ್ಲಿ ಎಲ್ಲಾ ವೈದ್ಯರು, ಅಧಿಕಾರಿಗಳು, ಸಿಬ್ಬಂದಿಗಳ ಶ್ರಮ ಅಪಾರ. ಶ್ರದ್ಧೆ ಮತ್ತು ಸಮರ್ಪಣಾ ಮನೋಭಾವದಿಂದ ಕೆಲಸ ಮಾಡುವ ತಂಡ ನಮ್ಮಲ್ಲಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಪ್ರತಿ ದಿನ ಬೆಳಿಗ್ಗೆ ಜಿಲ್ಲಾಸ್ಪತ್ರೆಗೆ ಆಮ್ಲಜನಕ ಬರುತ್ತಿತ್ತು. ಆದರೆ, ಇಂದು ಉತ್ಪಾದನಾ ಘಟಕದಲ್ಲಿ ಟ್ಯಾಂಕರ್ ಗೆ ಆಮ್ಲಜನಕ ತುಂಬುವಲ್ಲಿ ತಡವಾಗಿದ್ದ (3ನೇ ಪುಟಕ್ಕೆ)

# ಕಠಿಣ ಲಾಕ್‌ಡೌನ್‌ಗೆ ಸುಧಾಕರ್ ಇಂಗಿತ



ಬೆಂಗಳೂರು, ಮೇ 6 - ರಾಜ್ಯದಲ್ಲಿ ಕಠಿಣ ಲಾಕ್‌ಡೌನ್ ಜಾರಿಗೊಳಿಸುವ ಇಂಗಿತವನ್ನು ಆರೋಗ್ಯ ಸಚಿವ ಡಾ. ಕೆ. ಸುಧಾಕರ್ ವ್ಯಕ್ತಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಜಾರಿ ಇರುವ ಜನತಾ ಕರ್ಫ್ಯೂನಿಂದ ನಾವು ನಿರೀಕ್ಷೆ ಮಾಡಿದಷ್ಟು ಪ್ರಯೋಜನವಾಗಿಲ್ಲ. ಸರ್ಕಾರದ ಕಠಿಣ ತೀರ್ಮಾನಗಳನ್ನು ಜನರು ಅಲಕ್ಷ್ಯ ಮಾಡುತ್ತಿದ್ದಾರೆ. ಇದರಿಂದ ಸೋಂಕು ನಿಯಂತ್ರಣಕ್ಕೆ ಬರುತ್ತಿಲ್ಲ ಎಂದಿದ್ದಾರೆ.

ಜನರು ಸಹಕಾರ ನೀಡಬೇಕು. ಇಲ್ಲದಿದ್ದರೆ ಯಾವುದೇ ಪ್ರಯೋಜನವಾಗುವುದಿಲ್ಲ. ಸೋಂಕಿನ ಸರಪಳಿ ಕಡಿತಗೊಳಿಸಲು ಕನಿಷ್ಠ 14 ದಿನ ಬೇಕಾಗುತ್ತದೆ. ಈಗಾಗಲೇ ಏಳು ಎಂಟು ದಿನ ಕಳೆದಿದೆ. ನೆರೆಯ ಮಹಾರಾಷ್ಟ್ರದಲ್ಲಿ ಕಡಿಮೆಯಾಗಿದೆ. ಆದರೆ ನಮ್ಮಲ್ಲಿ ಕಡಿಮೆಯೂ ಆಗಿಲ್ಲ. ಕಡಿಮೆ ಆಗುತ್ತಿಲ್ಲ, ಏತಕ್ಕೆ? ಎಂದು ಪ್ರಶ್ನಿಸಿದರು.

ಕೊರೊನಾ ಕರ್ಫ್ಯೂ ಸಫಲವಾಗದ ಕಾರಣ ಲಾಕ್‌ಡೌನ್ ಜಾರಿಗೆ ತರುವುದು ಅನಿವಾರ್ಯ ಎಂದರು. ಮೇ 12ಕ್ಕೆ ಜಾರಿಯಲ್ಲಿರುವ ಕರ್ಫ್ಯೂ ಅವಧಿ ಮುಗಿಯುತ್ತದೆ. ಬಳಿಕ ಮುಖ್ಯಮಂತ್ರಿಯವ ರೊಟ್ಟಿಗೆ ಸಮಾಲೋಚನೆ ಮಾಡಿ, ಸರ್ಕಾರ ತನ್ನ ಗಟ್ಟಿ ತೀರ್ಮಾನ ಕೈಗೊಳ್ಳುತ್ತದೆ.

ಮೇ 15 ರ ನಂತರ ಯುವ ಸಮುದಾಯಕ್ಕೆ ಲಸಿಕೆ ನೀಡುವ ಅಭಿಯಾನ ಆರಂಭಗೊಳ್ಳುತ್ತದೆ. ರಾಜ್ಯಕ್ಕೆ ಅಗತ್ಯವಿರುವ ಲಸಿಕೆ ಖರೀದಿಸಲು ಎರಡು ಕಂಪನಿಗಳ ಜೊತೆ ಚರ್ಚೆ ಮಾಡಿದ್ದೇವೆ. ಲಸಿಕೆಗೆ ರಾಷ್ಟ್ರಾದ್ಯಂತ ಬೇಡಿಕೆ ಹೆಚ್ಚಿರುವುದರಿಂದ ನಾವು ನಿರೀಕ್ಷಿಸಿರುವಷ್ಟು ಲಸಿಕೆ ಪ್ರಮಾಣ ಲಭ್ಯವಾಗುತ್ತಿಲ್ಲ. ಇಷ್ಟರ ನಡುವೆಯು ಕೇಂದ್ರದ ಮೇಲೆ ಒತ್ತಡ ತಂದು ಲಸಿಕೆ ಪಡೆಯುವ ಪ್ರಯತ್ನ ಮಾಡುತ್ತಿದ್ದೇವೆ. ಲಸಿಕೆಗಾಗಿ ಹೆಚ್ಚು ಹಣವನ್ನು ಒದಗಿಸಿದ್ದೇವೆ ಎಂದರು.

ಸೋಂಕು ನಿವಾರಣೆಗಾಗಿ ಸಂಪುಟದ ಸಚಿವರು ಕೈ ಜೋಡಿಸಿದ್ದಾರೆ. ಇದರಿಂದ ನನ್ನ ಮೇಲಿದ್ದ ಭಾರ ಕಡಿಮೆಯಾಗಿದೆ. ಹಿರಿಯ ಸಚಿವರುಗಳಿಗೆ ಮುಖ್ಯಮಂತ್ರಿಯವರು ಹೊಣೆಗಾರಿಕೆ ವಹಿಸಿದ್ದಾರೆ. ಅವರು ನಮ್ಮ ಕಾರ್ಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವುದರಿಂದ ಜನರ ಜೀವ ಉಳಿಸಲು ಸರ್ಕಾರ ಪ್ರಯತ್ನ ಮಾಡುತ್ತಿದೆ ಎಂದರು.

# ಆಕ್ಸಿಜನ್ ಉಸ್ತುವಾರಿ ತಂಡ ರಚನೆ

### ಖಾಸಗಿ ಆರೋಗ್ಯ ಸೇವೆ ಪ್ಯಾಕೇಜ್ ದರ ಪರಿಷ್ಕರಣೆ

ದಾವಣಗೆರೆ, ಮೇ 6- ಕೋವಿಡ್ - 19 ಸೋಂಕು ರಾಜ್ಯದಲ್ಲಿ ಮತ್ತೊಮ್ಮೆ ಏರು ಮುಖ ಕಾಣಿಸುತ್ತಿದ್ದು, ಸೋಂಕಿತರಿಗೆ ಸಾರ್ವಜನಿಕ ಆರೋಗ್ಯ ಸಂಸ್ಥೆಗಳು ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಸರ್ಕಾರದಿಂದ ಸೂಚಿತವಾದ ಕೋವಿಡ್ ರೋಗಿಗಳ ಚಿಕಿತ್ಸೆಗಾಗಿ ಖಾಸಗಿ ಆರೋಗ್ಯ ಸೇವೆಗೆ ನೀಡುತ್ತಿರುವ ಪ್ಯಾಕೇಜ್ ದರಗಳನ್ನು ಸರ್ಕಾರ ಪರಿಷ್ಕರಿಸಿ ಆದೇಶಿಸಿದೆ.

ಕೋವಿಡ್ ಸೋಂಕಿತರ ಚಿಕಿತ್ಸೆಗಾಗಿ ಪಿಪಿಇ ಹಾಗೂ ಪರಿಕರಗಳನ್ನು ಒಳಗೊಂಡಂತೆ ಸೂಚಿಸಿರುವ ದರಗಳು ಇವಾಗಿದ್ದು, ಸಾರ್ವಜನಿಕ ಆರೋಗ್ಯ ಪ್ರಾಧಿಕಾರದಿಂದ ಶಿಫಾರಸ್ಸಾಗಿರುವ ಕೋವಿಡ್ ಸೋಂಕಿತರ ಚಿಕಿತ್ಸೆಗಾಗಿ ದಿನವೊಂದಕ್ಕೆ ಈ ಕೆಳಕಂಡ ಪ್ಯಾಕೇಜ್ ದರಗಳು ಅಧಿಸೂಚನೆಯ ದಿನಾಂಕ 06-05-2021 ರಿಂದ ಜಾರಿಗೊಳ್ಳುತ್ತವೆ.

**ಪರಿಷ್ಕೃತ ದರ :** ಜನರಲ್ ವಾರ್ಡ್ 5200 ರೂ., ಹೆಚ್‌ಡಿಯು 8000 ರೂ., ಐಸೋಲೇಷನ್ ಐಸಿಯು ವೆಂಟಿಲೇಟರ್‌ರಹಿತ 9750 ರೂ. ಮತ್ತು ಐಸೋಲೇಷನ್ ಐಸಿಯು ವೆಂಟಿಲೇಟರ್‌ಸಹಿತ 11500 ರೂ. ಆಗಿರುತ್ತದೆ.

ಈ ಆದೇಶವನ್ನು ಖಾಸಗಿಯವರು ಆಸ್ಪತ್ರೆಗಳು ಪಾಲಿಸದಿದ್ದಲ್ಲಿ ವಿಪತ್ತು ನಿರ್ವಹಣಾ ಕಾಯ್ದೆ 2005 ರ ಸೆಕ್ಷನ್ (51 ರಿಂದ 60) ಮತ್ತು ಭಾರತೀಯ ದಂಡ ಸಂಹಿತೆಯ ಸಂಬಂಧಿತ ವಿಭಾಗಗಳ ಅಡಿಯಲ್ಲಿ ಶಿಕ್ಷಾರ್ಹವಾಗಿರುತ್ತದೆ. ಇದಲ್ಲದೇ ಸಂಬಂಧಪಟ್ಟ ಭಾರತೀಯ ದಂಡನಾ ಕಾಯ್ದೆಯ ಸೂಕ್ತ ಸೆಕ್ಷನ್‌ಗಳಡಿಯಲ್ಲಿ ಶಿಕ್ಷಾರ್ಹವಾಗಿರುತ್ತದೆ ಮತ್ತು ಇತರೆ ಕಾನೂನುಗಳು ಅನ್ವಯಿಸುತ್ತವೆ. ಖಾಸಗಿಯವರು ಈ ದರಕ್ಕಿಂತ ಹೆಚ್ಚು ವಸೂಲಿ ಮಾಡಿದಲ್ಲಿ ಡಿಹೆಚ್‌ಓ ರವರಿಗೆ ದೂರು ನೀಡಿದಲ್ಲಿ ಸೂಕ್ತ ಕ್ರಮ ಜರುಗಿಸಲಾಗುವುದು ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ತಿಳಿಸಿದ್ದಾರೆ.

**ಆಕ್ಸಿಜನ್ ಉಸ್ತುವಾರಿ ತಂಡ :** ಕೋವಿಡ್ - 19 ಎರಡನೇ ಅಲೆಯ ಚಿಕಿತ್ಸೆಗೆ ಅತ್ಯಗತ್ಯವಾಗಿರುವ ಆಕ್ಸಿಜನ್ ಪೂರೈಕೆ, ಬೇಡಿಕೆ ಮತ್ತು ಲಭ್ಯತೆ ಕುರಿತು ದಿನದ 24 ಗಂಟೆ ಪರಿವೀಕ್ಷಣೆ ಮಾಡಲು ಮೂರು ಆಕ್ಸಿಜನ್ ಉಸ್ತುವಾರಿ ತಂಡಗಳನ್ನು ನಿಯೋಜಿಸಲಾಗುವುದು. ಇಬ್ಬರು ಅಧಿಕಾರಿಗಳು ಮತ್ತು ಇಬ್ಬರು ಸಹಾಯಕರನ್ನೊಳಗೊಂಡ 8 ಅವಧಿಯ ಮೂರು ಶಿಫ್ಟ್‌ಗಳಲ್ಲಿ ಕೆಲಸ ಮಾಡುವ ತಂಡಗಳನ್ನು ನಿಯೋಜಿಸಲಾಗುವುದು.

ಇಂದಿನ ವಿಡಿಯೋ ಕಾನ್ಫರೆನ್ಸ್‌ನಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಆಕ್ಸಿಜನ್ ಎಲ್ಲೂ ವ್ಯರ್ಥ ಮಾಡದಂತೆ, ನ್ಯಾಯಯುತವಾಗಿ ಬಳಕೆ ಮಾಡುವ ಬಗ್ಗೆ ಹಾಗೂ ಉಸ್ತುವಾರಿ ಮಾಡುವ ಬಗ್ಗೆ ಸೂಚನೆಗಳನ್ನು ನೀಡಿದ್ದಾರೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

# ವಿಪತ್ತಿನ ಸಮಯದಲ್ಲಿ ವದಂತಿ ಹರಡಿದರೆ ಕ್ರಮ : ಎಸ್ಪಿ

ದಾವಣಗೆರೆ, ಜೂ. 6 - ಕೊರೊನಾ ರಾಷ್ಟ್ರೀಯ ವಿಪತ್ತಿನ ಸಮಯದಲ್ಲಿ ತಪ್ಪು ಮಾಹಿತಿ, ವದಂತಿ, ಆಧಾರ ರಹಿತ ಹಾಗೂ ದುರುದ್ದೇಶದಿಂದ ಮಾಹಿತಿಗಳನ್ನು ಹರಡಿದರೆ ವಿಕೋಪ ನಿರ್ವಹಣೆ ಕಾಯ್ದೆಯಡಿ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯ ಎಚ್ಚರಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರದ ಬಟ್ಟೆ ಅಂಗಡಿಯೊಂದು ಅರ್ಧ ತೆಗೆದು ಮಾರಲಾಗುತ್ತಿದೆ ಎಂದು ಹಳೆಯ ವರ್ಷದ ವಿಡಿಯೋ ಅನ್ನು ಇತ್ತೀಚೆಗೆ ಜಾಲತಾಣದಲ್ಲಿ ಹರಿ ಬಿಡಲಾಗಿತ್ತು. ಅದೇ ರೀತಿ ಪೊಲೀಸರಿಂದ ದಂಡದ ರಸೀದಿಯಲ್ಲಿ ಹೆಸರು ಹಾಗೂ ಇತರೆ ವಿವರಗಳನ್ನು ಮರೆ ಮಾಚಿ, ಪೊಲೀಸರು ಅಮಾನವೀಯವಾಗಿ ನಡೆದು ಕೊಂಡಿದ್ದಾರೆ ಎಂದು ಹೇಳಿಕೆ ನೀಡುವ ತಪ್ಪು ಮಾಹಿತಿಯ ಚಿತ್ರವೊಂದನ್ನೂ ಸಹ ಹರಿ ಬಿಡಲಾಗಿತ್ತು ಎಂದು ಹೇಳಿದರು.



ಈ ಪ್ರಕರಣದಲ್ಲಿ ಭಾಗಿಯಾದ ಇಬ್ಬರೂ ಸಂಚಲನೆ ಸೃಷ್ಟಿಸಲು ಕೃತ್ಯ ಎಸಗಿದ್ದಾಗಿ ತಿಳಿಸಿದ್ದಾರೆ. ಈ ಬಗ್ಗೆ ಪ್ರಕರಣಗಳನ್ನು ದಾಖಲಿಸಲಾಗಿದೆ. ಕೊರೊನಾ ಸಂದರ್ಭದಲ್ಲಿ ದುರುದ್ದೇಶದಿಂದ ಮಾಹಿತಿ ಹರಡುವವರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಹನುಮಂತರಾಯ ಎಚ್ಚರಿಸಿದ್ದಾರೆ.

ಟ್ರಿಪಲ್ ರೈಡ್ ಮಾಡುವವರು ಹಾಗೂ ಮಾಸ್ಕ್ ಧರಿಸದೇ ಇರುವವರು ಪೊಲೀಸರಿಗೆ ದಂಡ ಹಾಕಬೇಡಿ ಎಂದು ಹೇಳುತ್ತಾ ಅಸಹಕಾರ ನೀಡುವುದು ಕಂಡು ಬರುತ್ತಿದೆ. ಜನರಿಗೆ ದಂಡ ಹಾಕುವುದು ನಮ್ಮ ಉದ್ದೇಶವಲ್ಲ. ಕೊರೊನಾ ಸಮಯದಲ್ಲಿ ಮುನ್ನೆಚ್ಚರಿಕೆ ವಹಿಸುವ ಮೂಲಕ ಜನರು ಸಹಕರಿಸಬೇಕು ಎಂದರು ಇದೇ ಸಂದರ್ಭದಲ್ಲಿ ತಿಳಿಸಿದರು.

ಕೊರೊನಾಗೆ (3ನೇ ಪುಟಕ್ಕೆ)

### ಆನ್‌ಲೈನ್‌ನಲ್ಲಿ ಲಸಿಕೆ ನೋಂದಣಿ ಮಾಡಿಸಿ

ಲಸಿಕಾ ಕೇಂದ್ರಗಳಲ್ಲಿ ಜನಸಂದಣಿ ಹೆಚ್ಚಾಗುವುದನ್ನು ತಪ್ಪಿಸಲು ಆನ್‌ಲೈನ್‌ನಲ್ಲಿ ಹೆಸರು ನೋಂದಾಯಿಸಬೇಕು ಎಂದು ಎಸ್ಪಿ ಹನುಮಂತರಾಯ ತಿಳಿಸಿದ್ದಾರೆ.

ಕಳೆದ ಕೆಲ ದಿನಗಳಿಂದ ಲಸಿಕೆ ನೀಡದ ಕಾರಣ ಈಗ ಜನಸಂದಣಿ ಹೆಚ್ಚಾಗಿದೆ. ಪ್ರಸಕ್ತ ಎರಡನೇ ಡೋಸ್ ಲಸಿಕೆಯಷ್ಟೇ ನೀಡುತ್ತಿರುವುದರಿಂದ ಜನಸಂದಣಿ ಕಡಿಮೆಯಾಗಲಿದೆ. ಜನರು ಆನ್‌ಲೈನ್ ಪೋರ್ಟಲ್ ಮೂಲಕ ಹೆಸರು ನೋಂದಾಯಿಸಿಕೊಳ್ಳಬೇಕು ಎಂದವರು ಹೇಳಿದರು.

## ಇನ್ನೆರಡು ವಾರ ನಿರ್ಬಂಧ ವಿಸ್ತರಣೆಗೆ ಪರಿಣಿತರ ಸಲಹೆ

ಬೆಂಗಳೂರು, ಮೇ 6 – ರಾಜ್ಯದಲ್ಲಿ ಕೊರೊನಾ ಸೋಂಕುಗಳು ಪತ್ತೆಯಾಗುತ್ತಿರುವ ಪ್ರಮಾಣ 50 ಸಾವಿರಕ್ಕೆ ತಲುಪಿದ್ದು, ಇನ್ನೂ ಹೆಚ್ಚಾಗುವ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ನಿರ್ಬಂಧಗಳನ್ನು ಇನ್ನೂ ಎರಡು ವಾರ ವಿಸ್ತರಣೆ ಮಾಡಬೇಕೆಂದು ತಾಂತ್ರಿಕ ಸಲಹಾ ಸಮಿತಿಯ ಸದಸ್ಯ ಡಾ. ಗಿರಿಧರ ಬಾಬು ಅಭಿಪ್ರಾಯ ಪಟ್ಟಿದ್ದಾರೆ.

ಪರೀಕ್ಷೆಯ ಸಂಖ್ಯೆಯನ್ನು ಕಡಿಮೆ ಮಾಡಲಾಗಿದೆ. ಹೀಗಾಗಿ ಎಷ್ಟರ ಮಟ್ಟಿಗೆ ಪ್ರಕರಣಗಳಿವೆ ಎಂಬುದು ಸ್ಪಷ್ಟವಾಗಿಲ್ಲ. ಆದರೂ, ಮುಂದಿನ ಎರಡು ವಾರಗಳಲ್ಲಿ ಕೊರೊನಾ ಸೋಂಕುಗಳು ಗರಿಷ್ಠ ಹಂತಕ್ಕೆ ತಲುಪಲಿವೆ ಎಂದವರು ತಿಳಿಸಿದ್ದಾರೆ.

ಲಾಕ್‌ಡೌನ್ ಕಾರಣದಿಂದಾಗಿ 5,800 ಜೀವಗಳು ಉಳಿದಿವೆ ಎಂಬುದು ಅಧ್ಯಯನವೊಂದರಿಂದ ತಿಳಿದು ಬಂದಿರುವುದಾಗಿಯೂ ಅವರು ಹೇಳಿದ್ದಾರೆ.

### ಜಿಲ್ಲೆಗೆ ಬಾರದ ಲಸಿಕೆ




ದಾವಣಗೆರೆ, ಮೇ 6 – ಜಿಲ್ಲೆಗೆ ಗುರುವಾರ ರಾಜ್ಯ ಸರ್ಕಾರದಿಂದ ಲಸಿಕೆ ಪೂರೈಕೆ ಆಗಿಲ್ಲ. ಇದರಿಂ ದಾಗಿ ಶುಕ್ರವಾರ ದಂದು ನಗರದಲ್ಲಿ ಲಸಿಕೆ ಲಭ್ಯವಾಗುವ ಸಾಧ್ಯತೆ ಇಲ್ಲ. ಜಿಲ್ಲೆಯಲ್ಲಿ ಗುರುವಾರ 2,300 ರಷ್ಟು ಕೋವಿಶೀಲ್ಡ್ ಲಸಿಕೆಯನ್ನು ನೀಡಲಾಗಿದೆ. ಹಲವಾರು ಗ್ರಾಮೀಣ ಭಾಗದ ಪಿ.ಹೆಚ್.ಸಿ.ಗಳಲ್ಲಿ 800ರಷ್ಟು ಲಸಿಕೆಗಳು ಉಳಿದಿವೆ ಎಂದು ಜಿಲ್ಲಾ ಕೋವಿಡ್ ಲಸಿಕಾ ನೋಡಲ್ ಅಧಿಕಾರಿಯಾಗಿರುವ ಡಾ. ಕೆ.ಎಸ್. ಮೀನಾಕ್ಷಿ ತಿಳಿಸಿದ್ದಾರೆ.

ಯಾವ ಪಿ.ಎ.ಸಿ.ಗಳಲ್ಲಿ ಲಸಿಕೆ ಉಳಿದಿದೆಯೋ ಅವರು ಮಾತ್ರ ನಾಳೆ ಶುಕ್ರವಾರ ಲಸಿಕೆ ನೀಡಲಿದ್ದಾರೆ ಎಂದಿರುವ ಅವರು, ಕೋವ್ಯಾಕ್ಸಿನ್ ಲಸಿಕೆ ಇನ್ನೂ ಜಿಲ್ಲೆಗೆ ಬಂದಿಲ್ಲ ಎಂದಿದ್ದಾರೆ.

### ಜಿಲ್ಲೆಯಲ್ಲಿ 672 ಸೋಂಕಿತರು ಪತ್ತೆ

ದಾವಣಗೆರೆ, ಮೇ 6 – ಜಿಲ್ಲೆಯಲ್ಲಿ ಗುರುವಾರ 672 ಕೊರೊನಾ ಸೋಂಕಿತರು ಪತ್ತೆಯಾಗಿದ್ದು, ಸಕ್ರಿಯ ಸೋಂಕಿತರ ಸಂಖ್ಯೆ 2,930ಕ್ಕೆ ತಲುಪಿದೆ.

ಇದೇ ದಿನ 273 ಜನರು ಕೊರೊನಾದಿಂದ ಗುಣಮುಖರಾಗಿ ಬಿಡುಗಡೆಯಾಗಿದ್ದಾರೆ.

ಜಗಳೂರಿನ 44 ವರ್ಷದ ಮಹಿಳೆ, ಹರಿಹರ ತಾಲ್ಲೂಕಿನ ಹೊಳೆಸಿರಿಗೆರೆಯ (3ನೇ ಪುಟಕ್ಕೆ)

### ರಾಜ್ಯದಲ್ಲಿ 49 ಸಾವಿರ ಸೋಂಕಿತರು

ಬೆಂಗಳೂರು, ಮೇ 6- ರಾಜ್ಯದಲ್ಲಿ ಗುರು ವಾರ 49,058 ಸೋಂಕಿತರು ಕಂಡು ಬಂದಿದ್ದು, ಇದೇ ದಿನ 328 ಜನ ಸಾವನ್ನಪ್ಪಿದ್ದಾರೆ. ಇದೇ ದಿನ 18,943 ಸೋಂಕಿತರು ಗುಣಮುಖರಾಗಿ ಬಿಡುಗಡೆಯಾಗಿದ್ದಾರೆ. ಪ್ರಸಕ್ತ ಸಕ್ರಿಯ ಸೋಂಕಿತರ ಸಂಖ್ಯೆ 5.17 ಲಕ್ಷಕ್ಕೆ ತಲುಪಿದೆ.

## ಲಸಿಕೆಗಾಗಿ ಮಲೇಬೆನ್ನೂರಿಗೆ ಆಗಮಿಸಿದ ದಾವಣಗೆರೆ ಜನರು

ಮಲೇಬೆನ್ನೂರು, ಮೇ 6- ಕೋವಿಡ್ ಲಸಿಕೆಗಾಗಿ ದಾವಣಗೆರೆ ನಗರದ ಜನರು ದೇವರಬೆಳಕೆರೆ ಮತ್ತು ಮಲೇಬೆನ್ನೂರು ಆರೋಗ್ಯ ಕೇಂದ್ರಗಳಿಗೆ ಗುರುವಾರ ಜಮಾಯಿಸಿದ್ದರಿಂದ ಕೆಲ ಹೊತ್ತು ಗೊಂದಲ ಸೃಷ್ಟಿ ಆಯಿತು.

ದೇವರಬೆಳಕೆರೆಯಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ 100 ಕ್ಕೂ ಹೆಚ್ಚು ಜನರು ದಾವಣಗೆರೆಯಿಂದ ಲಸಿಕೆ ಹಾಕಿಸಿಕೊಳ್ಳಲು ಆಗಮಿಸಿದಾಗ ದೇವರಬೆಳಕೆರೆಯ ಕೆಲವರು ವಿರೋಧ ವ್ಯಕ್ತಪಡಿಸಿದರು. ನಮ್ಮೂರಿನ ಜನರಿಗೆ ಇನ್ನೂ ಲಸಿಕೆ ಸಿಕ್ಕಿಲ್ಲ. ದಾವಣಗೆರೆಯಿಂದ ಇಲ್ಲಿಗೆ ಬಂದು ಲಸಿಕೆ ಹಾಕಿಸಿಕೊಂಡರೆ ನಮ್ಮ ಗತಿ ಏನು? ಎಂದು ಪ್ರಶ್ನಿಸಿದರು.

ಇದರಿಂದಾಗಿ ಸ್ವಲ್ಪ ಹೊತ್ತು ಗೊಂದಲ ಉಂಟಾಗಿ ಲಸಿಕೆ ಹಾಕುವುದು ತಡವಾಯಿತು. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಪೊಲೀಸರು, ಮೊದಲು ದೇವರಬೆಳಕೆರೆ ಜನರಿಗೆ ಆದ್ಯತೆ ನೀಡಿ, (3ನೇ ಪುಟಕ್ಕೆ)

## ಕೊರೊನಾ : ಟೆಸ್ಟ್ ವರದಿಗೆ ಮುಂಚೆ ಚಿಕಿತ್ಸೆ

ಬೆಂಗಳೂರು, ಮೇ 6 – ಕೊರೊನಾ ಸೋಂಕಿನ ಲಕ್ಷಣಗಳು ಕಂಡು ಬಂದರೆ, ಆರ್.ಟಿ.- ಪಿ.ಸಿ.ಆರ್. ಟೆಸ್ಟ್ ವರದಿ ಬರುವುದಕ್ಕೆ ಮುಂಚೆಯೇ ಚಿಕಿತ್ಸೆ ಆರಂಭಿಸುವಂತೆ ಆರೋಗ್ಯ ಇಲಾಖೆ ಸುತ್ತೋಲೆ ಹೊರಡಿಸಿದೆ.

ರಾಜ್ಯದಲ್ಲಿ ನಡೆಸಲಾಗುತ್ತಿರುವ ಟೆಸ್ಟ್‌ಗಳಲ್ಲಿ ಕೊರೊನಾ ಪಾಸಿಟಿವ್ ಬರುವ ಪ್ರಮಾಣ ಶೇ.30ರಷ್ಟಿದೆ. ಈ ಹಿನ್ನೆಲೆಯಲ್ಲಿ, ಟೆಸ್ಟ್‌ಗೆ ಗಂಟಲು ದ್ರವ ಸಂಗ್ರಹಿಸಿದ ಸಂದರ್ಭದಲ್ಲಿ ರೋಗ ಲಕ್ಷಣಗಳಿದ್ದರೆ ತಕ್ಷಣವೇ ಚಿಕಿತ್ಸೆ ಆರಂಭಿಸಬೇಕು ಎಂದು ತಿಳಿಸಲಾಗಿದೆ.

ಲಕ್ಷಣಗಳಿರುವವರ ಜೊತೆಗೆ ಪ್ರಾಥಮಿಕ ಸಂಪರ್ಕದಲ್ಲಿರುವವರಿಗೂ ಚಿಕಿತ್ಸೆ ನೀಡುವಂತೆ ಸೂಚನೆ ನೀಡಲಾಗಿದೆ. ಒಂದು ವೇಳೆ ಪರೀಕ್ಷೆಯಲ್ಲಿ ಪಾಸಿಟಿವ್ ಬಂದರೆ ರಾಜ್ಯ ಸರ್ಕಾರದ ಮಾರ್ಗಸೂಚಿಗಳ ಅನ್ವಯ ಚಿಕಿತ್ಸೆ ನೀಡುವಂತೆ ತಿಳಿಸಲಾಗಿದೆ.

### ಪೆಟ್ರೋಲ್, ಡೀಸೆಲ್ ಬೆಲೆ ಮೂರನೇ ದಿನ ಏರಿಕೆ

ನವದೆಹಲಿ, ಮೇ 6 – ಗುರುವಾರದಂದು ಪೆಟ್ರೋಲ್ ಬೆಲೆಯನ್ನು ಲೀಟರ್‌ಗೆ 25 ಪೈಸೆ ಹಾಗೂ ಡೀಸೆಲ್ ಬೆಲೆಯನ್ನು 30 ಪೈಸೆಯಷ್ಟು ಹೆಚ್ಚಿಸಲಾಗಿದೆ. ಸತತ ಮೂರನೇ ದಿನ ತೈಲ ಬೆಲೆಯನ್ನು ಹೆಚ್ಚಿಸಲಾಗಿದೆ.

ಐದು ವಿಧಾನಸಭೆಗಳಿಗೆ ನಡೆದ ಚುನಾವಣೆ ಪೂರ್ಣಗೊಂಡ ನಂತರ ತೈಲ ಬೆಲೆ ಏರಿಕೆಗೆ ಮರು ಚಾಲನೆ ನೀಡಲಾಗಿದೆ. ಸ್ಥಳೀಯ ತೆರಿಗೆಗಳಿಗೆ ಅನುಗುಣವಾಗಿ ಬೆಲೆ ಏರಿಕೆಯಲ್ಲಿ ವ್ಯತ್ಯಾಸವಿದೆ.

### ಖಾಸಗಿ ಆಸ್ಪತ್ರೆಗಳಲ್ಲಿ ಲಸಿಕಾ ಶುಲ್ಕ 100 ರೂ.

ಬೆಂಗಳೂರು, ಮೇ 6 – ಖಾಸಗಿ ಆರೋಗ್ಯ ಸಂಸ್ಥೆಗಳಲ್ಲಿ ನೀಡಲಾಗುವ ಕೊರೊನಾ ಲಸಿಕೆಯ ಪ್ರತಿ ಡೋಸ್‌ಗೆ 100 ರೂ. ಸೇವಾ ಶುಲ್ಕ ಪಡೆಯಬೇಕೆಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಆದೇಶ ಹೊರಡಿಸಿದೆ.

ಕೇಂದ್ರ ಆರೋಗ್ಯ ಸಚಿವಾಲಯದ ಮಾರ್ಗ ಸೂಚಿಯಂತೆ ಈ ಕ್ರಮ ತೆಗೆದುಕೊಳ್ಳಲಾಗಿದೆ. ಹೆಚ್ಚಿನ ಸೇವಾ ಶುಲ್ಕ ಪಡೆದರೆ ರಾಜ್ಯ ವಿಪತ್ತು ನಿರ್ವಹಣಾ ಕಾಯ್ದೆಯಡಿ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಲಾಗಿದೆ.

MANIS DATA LINK
# 446/1, Lawyer Road, K.B.Extension, Davanagere.
BSNL
ನಿಮ್ಮಲ್ಲಿರುವ ಹಳೇ ಲ್ಯಾಂಡ್ ಲೈನ್ ನಂಬರ್‌ಗೆ ಇಂಟರ್‌ನೆಟ್ (FTTH) ಸೌಲಭ್ಯ ಕಲ್ಪಿಸಲಾಗುವುದು
3300 GB
60 Mbps
Super Speed Inter Net
24 Hrs. Unlimited free Calling on (Local + STD) to Any Network, FTTH Plan
Starting Plan
Rs.599/-
Instalation Free
PH: 08192 295900

## ಖಾತ್ರಿ ಯೋಜನೆಯಡಿ ಕೊಣಚಕಲ್ ಐತಿಹಾಸಿಕ ಪುಷ್ಕರಣೆಯ ಸ್ವಚ್ಛತೆ

ಜಗಳೂರು, ಮೇ 6- ಕೊರೊನಾ ಹಿನ್ನೆಲೆಯಲ್ಲಿ ಇಡೀ ರಾಜ್ಯವೇ ತಲ್ಲಣಗೊಂಡು ಜನರ ಜೀವನ ಕಷ್ಟಕರವಾಗಿದ್ದ ಸಂದರ್ಭದಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ ತಾಲ್ಲೂಕಿನಲ್ಲಿ ನಡೆಯುತ್ತಿರುವ ಕಾಮಗಾರಿಗಳು ಕೂಲಿ ಕಾರ್ಮಿಕರಿಗೆ ನೆರವಾಗಿವೆ ಎಂದು ದಾವಣಗೆರೆ ಜಿ.ಪಂ. ಉಪ ಕಾರ್ಯದರ್ಶಿ ಆನಂದ್ ಹೇಳಿದರು.

ತಾಲ್ಲೂಕಿನ ಗುತ್ತಿದುರ್ಗ ಗ್ರಾಮ ಪಂಚಾಯಿತಿಗೆ ಸೇರಿರುವ ಕೊಣಚಕಲ್ ರಂಗನಾಥಸ್ವಾಮಿ ದೇವಸ್ಥಾನದ ಹತ್ತಿರವಿರುವ 150 ಅಡಿಗಿಂತ ಹೆಚ್ಚು ಆಳ ಇರುವ ಐತಿಹಾಸಿಕ ಪುಷ್ಕರಣೆಯ ಹೂಳು ತೆಗೆದು ಸ್ವಚ್ಛತಾ ಕಾರ್ಯ ನಡೆಸುತ್ತಿರುವ ಸ್ಥಳಕ್ಕೆ ಭೇಟಿ ನೀಡಿ, ವೀಕ್ಷಿಸಿ, ನೂರಾರು ಕೂಲಿ ಕಾರ್ಮಿಕರು ಸಾಮಾಜಿಕ ಅಂತರದೊಂದಿಗೆ ಕೆಲಸ ನಿರ್ವಹಿಸುತ್ತಿರುವುದು ಶ್ಲಾಘನೀಯ ಎಂದರು.

**ಬದು ನಿರ್ಮಾಣ, ಹೂಳು ತೆಗೆಯಲು ಆದ್ಯತೆ:** ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ ನೂರೈವತ್ತಕ್ಕೂ ಅಧಿಕ ಅಡಿ ಆಳ ಇರುವ ಐತಿಹಾಸಿಕ ಪುಷ್ಕರಣೆಯ ಹೂಳು ತೆಗೆದು ಸ್ವಚ್ಛತೆಗೊಳಿಸುತ್ತಿರುವುದು ಶ್ಲಾಘನೀಯ. ಜೊತೆಗೆ ರಸ್ತೆ ನಿರ್ಮಾಣ, ಸುತ್ತಲೂ ಗಿಡಗಳನ್ನು ಹಾಕಿ ಪ್ರವಾಸಿ ತಾಣದಂತೆ ಮಾಡಬೇಕು. ಕೊರೊನಾ ಹಿನ್ನೆಲೆಯಲ್ಲಿ ಸಾಮಾಜಿಕ ಅಂತರ, ಮಾಸ್ಕ್ ಧರಿಸುವ ಮೂಲಕ ಕೆಲಸ ನಿರ್ವಹಿಸುವಂತೆ ಕೂಲಿ ಕಾರ್ಮಿಕರಿಗೆ ಸೂಚಿಸಿದರು.

ರೈತರ ಜಮೀನುಗಳಲ್ಲಿ ವೈಯಕ್ತಿಕ ಕಾಮಗಾರಿಯಾಗಿ ಬದು ನಿರ್ಮಾಣವನ್ನು ಹೆಚ್ಚು ಹೆಚ್ಚು ಮಾಡಿಕೊಳ್ಳಬೇಕು. ಹೂಳು ತೆಗೆಯಲು, ಬದು ನಿರ್ಮಾಣಕ್ಕೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದ್ದು, ಸಿಮೆಂಟ್ ರಸ್ತೆ ಕಾಮಗಾರಿಗಳನ್ನು ಸದ್ಯ ಸ್ಥಗಿತಗೊಳಿಸಿ ಹೆಚ್ಚಿನ ಕೂಲಿ ಸಿಗುವಂತಹ ಕೆಲಸಗಳಿಗೆ ಆದ್ಯತೆ ನೀಡಲಾಗುತ್ತಿದೆ. ಕೂಲಿ ಕಾರ್ಮಿಕರು ಆಯಾ ಗ್ರಾಮ ಪಂಚಾಯ್ತಿಗಳಲ್ಲಿ ಕೆಲಸ ಮಾಡಬಹುದು ಎಂದರು.

ತಾಲ್ಲೂಕು ಕಾರ್ಯನಿರ್ವಹಣಾಧಿಕಾರಿ ಮಲ್ಲನಾಯ್ಕ ಮಾತನಾಡಿ, ತಾಲ್ಲೂಕಿನ ಗುತ್ತಿದುರ್ಗ ಸೇರಿದಂತೆ 22 ಗ್ರಾ.ಪಂ.ಗಳಲ್ಲಿ (3ನೇ ಪುಟಕ್ಕೆ)



ಕೊಣಚಕಲ್ ರಂಗನಾಥಸ್ವಾಮಿ ದೇವಸ್ಥಾನದ ಹತ್ತಿರವಿರುವ 150 ಅಡಿಗಿಂತ ಹೆಚ್ಚು ಆಳ ಇರುವ ಐತಿಹಾಸಿಕ ಪುಷ್ಕರಣೆಯಲ್ಲಿ ನೂರಾರು ಕೂಲಿ ಕಾರ್ಮಿಕರು ಸಾಮಾಜಿಕ ಅಂತರದೊಂದಿಗೆ ಕೆಲಸ ನಿರ್ವಹಿಸುತ್ತಿರುವುದು.

## ಆರೋಗ್ಯ ಇಲಾಖೆ ಹೊರಗುತ್ತಿಗೆ ನೇಮಕಾತಿ ಅವಧಿ ವಿಸ್ತರಣೆ

ಬೆಂಗಳೂರು, ಮೇ 6 – ಕೊರೊನಾ ಪರಿಸ್ಥಿತಿ ನಿಭಾಯಿಸಲು ಈ ಹಿಂದೆ ನೇಮಿಸಿಕೊಳ್ಳಲಾದ ಹೊರಗುತ್ತಿಗೆ ಇಲ್ಲವೇ ನೇರ ಗುತ್ತಿಗೆ ಶುಶ್ರೂಷಕರು, ಲ್ಯಾಬ್ ಟೆಕ್ನೀಷಿಯನ್, ಫಾರ್ಮಾಸಿಸ್ಟ್ ಹಾಗೂ ಗ್ರೂಪ್ - ಡಿ ಹುದ್ದೆಗಳ ಅವಧಿಯನ್ನು ಆರು ತಿಂಗಳು ವಿಸ್ತರಿಸಲು ಆರೋಗ್ಯ ಸಚಿವಾಲಯ ಆದೇಶ ಹೊರಡಿಸಿದೆ.

ಈ ಹಿಂದೆ ಏಪ್ರಿಲ್ 1ರವರೆಗೆ ಅನ್ವಯವಾಗುವಂತೆ ನೇಮಕ ಮಾಡಿಕೊಳ್ಳಲಾಗಿತ್ತು.

ಅವರ ಅವಧಿಯನ್ನು ಈಗ ಸೆಪ್ಟೆಂಬರ್ 30ರವರೆಗೆ ವಿಸ್ತರಿಸಲಾಗಿದೆ.


**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ. : 98453 17181

**ಪಾರ್ಟ್ ಟೈಂ ಕೆಲಸ**
SBI Life Insurance ನಲ್ಲಿ Insurence Agent ಆಗಿ ಪಾರ್ಟ್ ಟೈಂ ಕೆಲಸ ಮಾಡಿ ತಿಂಗಳಿಗೆ 30,000/- ಸಂಪಾದಿಸುವ ಅವಕಾಶ, 30 ವರ್ಷ ಮೇಲ್ಪಟ್ಟವರು SSLC ಪಾಸಾದವರು ಕರೆ ಮಾಡಿ
99009 19091

**ಜೈ ಶ್ರೀಮನ್ನಾರಾಯಣ**
ವಿಕಾಸ ತರಂಗಿಣಿ, ದಾವಣಗೆರೆ
ಸ್ಫೂರ್ತಿ ಸೇವಾ ಟ್ರಸ್ಟ್
**ಪ್ರಸಾದ ದಾಸೋಹ**
ಇಂದಿನ ಪ್ರಸಾದ ವಿತರಕರು
ಶ್ರೀ ವೀರಮಾಚಿನೇನಿ ರಾಘುವೇಂದ್ರ ಪ್ರಸಾದ್ ಮತ್ತು ಕುಟುಂಬ ವರ್ಗದವರ ಸೇವಾರ್ಥ
ಶ್ರೀ ರಾಘುವೇಂದ್ರ ಆಟೋಮೊಬೈಲ್ಸ್ ಮತ್ತು ಸ್ವರಾಜ್ ಟ್ರ್ಯಾಕ್ಟರ್ ಅಧಿಕೃತ ಮಾರಾಟಗಾರರು, ದಾವಣಗೆರೆ.
ಸ್ಥಳ : ಸಿ.ಜಿ. ಆಸ್ಪತ್ರೆ ಮುಂಭಾಗ, 12 ಗಂಟೆಗೆ ಮತ್ತು ಹೆರಿಗೆ ಆಸ್ಪತ್ರೆ ಮುಂಭಾಗ, 12.30ಕ್ಕೆ

**ಸೈಟ್‌ಗಳು ಮಾರಾಟಕ್ಕಿವೆ**
ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ 30x55 East, ಡಾಲರ್ಸ್ ಕಾಲೋನಿಯಲ್ಲಿ 30x50 North, ಕೆ.ಹೆಚ್.ಬಿ ಯಲ್ಲಿ 30x50 East
ರಿಯಲ್ ಎಸ್ಟೇಟ್ ಏಜೆಂಟ್ ಐನಳ್ಳಿ ಚನ್ನಬಸಪ್ಪ
99166 12110

**ಸೈಟ್‌ಗಳು ಮಾರಾಟಕ್ಕಿವೆ**
30x38 ಪೂರ್ವ, ಮಹಾಲಕ್ಷ್ಮಿ ಲೇಔಟ್ ಪಕ್ಕದಲ್ಲಿ, ಹಳೇ ಅಮರಾವತಿಯಲ್ಲಿ, 30x40 ಪೂರ್ವ, ಬಂಟರ ಕಲ್ಯಾಣ ಮಂಟಪದ ಹತ್ತಿರ
ಮಂಜುನಾಥ್ ಏಜೆಂಟ್
98444 91792

**ಸೈಟ್‌ಗಳು ಮಾರಾಟಕ್ಕಿವೆ**
ಸ್ವಾಮಿ ವಿವೇಕಾನಂದ ಬಡಾವಣೆಯಲ್ಲಿ 30x58 ಪೂರ್ವ, 30x50 ಉತ್ತರ, ಬನಶಂಕರಿ ಬಡಾವಣೆಯಲ್ಲಿ 30x50 ಪಶ್ಚಿಮ, 30x36 ಪಶ್ಚಿಮ, ವಿನಾಯಕ ಬಡಾವಣೆಯಲ್ಲಿ 30x56 ಉತ್ತರ ಅಕ್ಕ-ಪಕ್ಕ
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715

**ಮಳಿಗೆ ಬಾಡಿಗೆಗಿದೆ (ಕಾರ್ನರ್)**
ನರಸರಾಜ ರಸ್ತೆಯಲ್ಲಿ ವಾಣಿಜ್ಯ ಮಳಿಗೆ ಬಾಡಿಗೆಗೆ ಇದೆ.
ಸಂಪರ್ಕಿಸಿ
98809 55777

**ಜಮೀನು ಕೊಳ್ಳಲು ಬೇಕಾಗಿರುತ್ತದೆ.**
ಹರಿಹರ, ದಾವಣಗೆರೆ
74112 50447

**ಮಾರಾಟಕ್ಕೆ ಇವೆ**
ಉಪಯೋಗಿಸಿರುವ ಸಾರವಿ ಪೋಲ್ಸ್ ಮಾರಾಟಕ್ಕಿವೆ.
ಸಂಪರ್ಕಿಸಿರಿ :
99028 78035

**ಜಮೀನು ಮಾರಾಟಕ್ಕಿದೆ**
ಹರಿಹರ, ದೇವರ ಬೆಳಕೆರೆ, ಬಾತಿ, ಕೊಂಡಜ್ಜಿ.
74112 50447

**ಲಿಂಗಾಯಿತ ಅಡುಗೆಯವರು ಬೇಕಾಗಿದ್ದಾರೆ**
ಮನೆಯಲ್ಲಿ ರುಚಿಕಟ್ಟಾಗಿ ನಾರ್ಥ್ ಇಂಡಿಯನ್ ಮತ್ತು ಸೌತ್ ಇಂಡಿಯನ್ ಅಡುಗೆ ಮಾಡಲು ಲಿಂಗಾಯಿತ ಮಹಿಳೆ ಬೇಕಾಗಿದ್ದಾರೆ. ವಿದ್ಯಾನಗರದ ಸುತ್ತಮುತ್ತಲಿನವರಿಗೆ ಮೊದಲ ಆದ್ಯತೆ. ಆಸಕ್ತರು ಸಂಪರ್ಕಿಸಿ :
ಮೊ. : 94480 55555

**ಮಾರಾಟಕ್ಕೆ ಇವೆ**
ಹಳೆಯ ಚಪ್ಪಟಿ ಕಲ್ಲುಗಳು ಮಾರಾಟಕ್ಕಿವೆ.
ಸಂಪರ್ಕಿಸಿರಿ :
99028 78035

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯಿತ ವಧು-ವರರ ಕೇಂದ್ರ
H.O : Near coffee day, Nutana collage road, Vidyanagara 2nd main, Davangere
77603 16576
90080 55813

**ಶ್ರೀ ಅಣಿಗೆರೆಕಟ್ಟೆ ಜ್ಯೋತಿಷ್ಯ ಫಲ**
ಮೋಡಿ ಮಾಂತ್ರಿಕ ಗಿಡ್ಡಪ್ಪ
ಶ್ರೀ ಚೌಡೇಶ್ವರಿ ಭೂತರಾಯ ಆರಾಧಕರು. 48 ಗಂಟೆಯಲ್ಲಿ ಪರಿಹಾರ. ವಶೀಕರಣ, ಮನ:ಪ್ರೇತಬಾಧೆ, ಅಂಗುಷ್ಠ ವಶೀಕರಣ, ಇಷ್ಟಪಟ್ಟವರು ನಿಮ್ಮಂತೆ ಆಗಲು ನಮ್ಮಲ್ಲಿ ಶಾಶ್ವತ ಪರಿಹಾರ. ಸಂಪರ್ಕಿಸಿ :
9980770791, 9606818273

**ಸಾಲಗಳಿಗೆ ಸಂಪರ್ಕಿಸಿ**
(ಬಡ್ಡಿ ದರ ವಾರ್ಷಿಕ 7% ರಿಂದ ಪ್ರಾರಂಭ)
ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ, ಕಟ್ಟಿರುವ ಮನೆಗೆ ಸಾಲ, ಬೇರೆ ಬ್ಯಾಂಕ್‌ನಲ್ಲಿ ತೆಗೆದುಕೊಂಡಿರುವ ಸಾಲ ವರ್ಗಾವಣೆ ಮತ್ತು ಅಧಿಕ ಸಾಲಕ್ಕಾಗಿ ಸಂಪರ್ಕಿಸಿ.
(ಸಂಬಳ ಮತ್ತು ವ್ಯವಹಾರದಾರರಿಗೆ ಮಾತ್ರ)
73385 80345

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ಧಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಬೇಕಾಗಿದ್ದಾರೆ**
ನಗರದ ಪ್ರತಿಷ್ಠಿತ ಮನೆಯೊಂದರಲ್ಲಿ ಮನೆ ಕೆಲಸ ಹಾಗೂ ಮನೆಯ ಎಲ್ಲಾ ಜವಾಬ್ದಾರಿ ನಿರ್ವಹಿಸಲು ಮಹಿಳೆ ಬೇಕಾಗಿದ್ದಾರೆ. ಊಟ, ವಸತಿ, ವ್ಯವಸ್ಥೆ ಇದೆ.
ಸಂಬಳ ರೂ. 20,000. ಸಂಪರ್ಕಿಸಿ
90209 05000

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ॥ ಎಸ್.ಎಂ. ಸೇಠಿ. ಫೋನ್ : 96322 95561
ಸಮಯ: ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ.


# ಕೊರೊನಾ : ತುರ್ತು ಸೇವಾ ವಾಹನಕ್ಕೆ ಹಸಿರು ನಿಶಾನೆ




ಮಲೇಬೆನ್ನೂರು, ಮೇ 6- ಇಲ್ಲಿನ ಪುರಸಭೆ ಮುಂಭಾಗದಲ್ಲಿ ಬಿಜೆಪಿ ಮುಖಂಡ ಹಾಗೂ ಪಂಚಮಸಾಲಿ ಪೀಠದ ಧರ್ಮದರ್ಶಿ ಚಂದ್ರಶೇಖರ್ ಪೂಜಾರ್ ಅವರು ತಮ್ಮ ಜನ್ಮ ದಿನದ ಅಂಗವಾಗಿ ಸಾರ್ವಜನಿಕರ ಸೇವೆಗಾಗಿ ನೀಡಿರುವ ತುರ್ತು ಸೇವಾ ವಾಹನಕ್ಕೆ ಪುರಸಭೆ ಅಧ್ಯಕ್ಷರಾದ ಶ್ರೀಮತಿ ಪಾನಿಪೂರಿ ರಂಗನಾಥ್ ಹಸಿರು ನಿಶಾನೆ ತೋರಿಸಿ ಚಾಲನೆ ನೀಡಿದರು.

ನಂತರ ಮಾತನಾಡಿದ ಚಂದ್ರಶೇಖರ್ ಪೂಜಾರ್, ಕೊರೊನಾ ಮಹಾಮಾರಿ 2ನೇ ಅಲೆ ವ್ಯಾಪಕವಾಗಿ ಹರಡುತ್ತಿದ್ದು, ಬಡ ಜನರಿಗೆ ಆಸ್ಪತ್ರೆಗೆ ತೆರಳಲು ತೊಂದರೆ ಆಗುತ್ತಿರುವುದನ್ನು ಮನಗಂಡು ಈ ತುರ್ತು ಸೇವಾ ವಾಹನವನ್ನು ಉಚಿತವಾಗಿ ಸಾರ್ವಜನಿಕರಿಗೆ ನೀಡಿದ್ದೇನೆ. ಹರಿಹರ ತಾಲ್ಲೂಕಿನ ಜನರು ಸಹಾಯ ವಾಣಿ ನಂ- 7411655112 ಅಥವಾ 7411655113 ಗೆ ಫೋನ್ ಮಾಡಿದರೆ ಸಾಕು ವಾಹನ ನೀವು ನೀಡಿದ ವಿಳಾಸಕ್ಕೆ ಬರಲಿದೆ. ಇದಕ್ಕಾಗಿ ನೀವು ಒಂದು ರೂಪಾಯಿ ಕೂಡ ಹಣ ನೀಡಬೇಕಾಗಿಲ್ಲ ಎಂದು ತಿಳಿಸಿದರು.

ಇದಲ್ಲದೇ ಇನ್ನೂ ಅಗತ್ಯ ಸೇವೆಯ ಬಗ್ಗೆ ಯಾರಾದರೂ ಮಾಹಿತಿ ನೀಡಿದರೆ, ಅದಕ್ಕೆ ಸ್ಪಂದಿಸುತ್ತೇನೆಂದು ಚಂದ್ರಶೇಖರ್ ಪೂಜಾರ್ ಹೇಳಿದರು.

ಪುರಸಭೆ ಸದಸ್ಯರಾದ ಬಿ. ಸುರೇಶ್, ಮಹಾಂತೇಶ್ ಸ್ವಾಮಿ, ಸುಬ್ಬಿ ರಾಜಪ್ಪ, ಮಾಸಣಗಿ ಶೇಖರಪ್ಪ, ನಾಮಿನಿ ಸದಸ್ಯರಾದ ಪಿ.ಆರ್. ರಾಜು, ಬಿ.ಹೆಚ್. ಮಂಜಪ್ಪ, ಎ.ಕೆ. ಲೋಕೇಶ್, ಆಶ್ರಯ ಸಮಿತಿ ಸದಸ್ಯ ಬಿ.

**ಮಲೇಬೆನ್ನೂರು**

ಚಂದ್ರಪ್ಪ, ಆರೋಗ್ಯ ರಕ್ಷಾ ಸಮಿತಿ ಸದಸ್ಯರಾದ ಬಿ. ಮಂಜುನಾಥ್, ಪಾನಿಪೂರಿ ರಂಗನಾಥ್, ಹರಿಹರ ನಗರಸಭೆ ಸದಸ್ಯ ರಜನಿಕಾಂತ್, ರಾಘವೇಂದ್ರ, ವಕೀಲ ಆನಂದ್, ಪ್ರವೀಣ್, ಗುತ್ತೂರ ಕರಿಬಸಪ್ಪ, ದೀಟೂರು ನಿರಂಜನ್, ಜಿ.ಪಿ. ಹನುಮಗೌಡ ಹಾಗೂ ಇನ್ನಿತರರಿದ್ದರು.

**ಪೂಜೆ ಸಲ್ಲಿಸಿ ಪ್ರಾರಂಭ:** ಇದಕ್ಕೂ ಮುನ್ನ ಚಂದ್ರಶೇಖರ್ ಪೂಜಾರ್ ಅವರು ಪಂಚಮಸಾಲಿ ಪೀಠದಲ್ಲಿರುವ ಹರ ಮಂದಿರದಲ್ಲಿ ವಿಶೇಷ ಪೂಜೆ ಸಲ್ಲಿಸಿ, ಶ್ರೀ ವಚನಾನಂದ ಸ್ವಾಮೀಜಿ ಆಶೀರ್ವಾದ ಪಡೆದರು. ಈ ಸಂದರ್ಭದಲ್ಲಿ ಶ್ರೀಗಳು ಚಂದ್ರಶೇಖರ್ ಅವರನ್ನು ಸನ್ಮಾನಿಸಿ, ಹುಟ್ಟುಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸಿಕೊಳ್ಳುತ್ತಿರುವ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

## ಗಾಳಿ, ಮಳೆಯಿಂದ ಭತ್ತಕ್ಕೆ ಹಾನಿ


ಹರಿಹರ

ಹರಿಹರ, ಮೇ 6- ತಾಲ್ಲೂಕಿನಲ್ಲಿ ಕಳೆದ ಏಳೆಂಟು ದಿನಗಳಿಂದ ತೀವ್ರತರನಾದ ಗಾಳಿ ಸಹಿತ ಮಳೆಯಾಗುತ್ತಿದ್ದು, ಬೇಸಿಗೆ ಹಂಗಾಮಿನಲ್ಲಿ ಬೆಳೆದ ಭತ್ತವು ಹಾನಿಗೊಳಗಾಗಿದೆ.

ವಾಡಿಕೆ ಮಳೆಗಿಂತ ಶೇ. 57 ರಷ್ಟು ಹೆಚ್ಚಿನ ಮಳೆಯಾಗಿದ್ದು, ಈವರೆಗೆ ಆದಂತಹ ಗಾಳಿ ಸಹಿತ ಮಳೆಗೆ 32 ಗ್ರಾಮಗಳಿಂದ 754 ಹೆಕ್ಟೇರ್ ಭತ್ತಕ್ಕೆ ಹಾನಿಯಾಗಿ ಸುಮಾರು ಒಂದು ಕೋಟಿಯಷ್ಟು ನಷ್ಟವಾಗಿದೆ. ಸಂಕಷ್ಟದಲ್ಲಿರುವ ಬೆಳೆಯನ್ನು ಉಳಿಸಿಕೊಳ್ಳಲು ರೈತರು ಅಗತ್ಯ ಕ್ರಮವನ್ನು ತಕ್ಷಣವೇ ಕೈಗೊಳ್ಳಬೇಕಿದೆ.

ಕಟಾವಿಗೆ ಸಿದ್ಧವಿರುವ ಭತ್ತವನ್ನು ಸೂಕ್ತ ಸಮಯ ನೋಡಿ ಕಟಾವು ಮಾಡಿ ಸಂಗ್ರಹಿಸಿಟ್ಟುಕೊಳ್ಳುವುದು. ಜಮೀನಿನಲ್ಲಿ ನಿಂತ ನೀರನ್ನು ಹೊರ ಹಾಕಲು ಕಾಲುವೆ ನಿರ್ಮಿಸಿ, ಹೆಚ್ಚಿನ ಪ್ರಮಾಣದಲ್ಲಿ ತುರ್ತಾಗಿ ನೀರು ಹೊರ ಬಿಡುವುದು, ಕೂಲಿಕಾರರ ಮುಖಾಂತರ ಭತ್ತವನ್ನು ಕಟಾವು ಮಾಡುವುದರಿಂದ ಕಾಳು ಉದುರುವ ಪ್ರಮಾಣ ಕಡಿಮೆಯಾಗುವುದು.

ಕೃಷಿ ಮತ್ತು ಕಂದಾಯ ಇಲಾಖೆಯ ಸಿಬ್ಬಂದಿಗಳು ಈಗಾಗಲೇ ಜಂಟಿ ಸಮೀಕ್ಷೆ ಕೈಗೊಂಡಿದ್ದು, ನಷ್ಟ ಅನುಭವಿಸಿದ ಪ್ರತಿ ರೈತರ ಯಾದಿಯನ್ನು ಸಿದ್ಧಪಡಿಸಲಾಗುತ್ತಿದೆ. ಬೇಸಿಗೆ ಹಂಗಾಮಿನ ಬೆಳೆ ಸಮೀಕ್ಷೆ ಕಾರ್ಯಕ್ರಮದಡಿ ರೈತರು ತಾವು ಬೆಳೆದ ಬೆಳೆ ದಾಖಲೀಕರಣಗೊಳಿಸದೇ ಇದ್ದಲ್ಲಿ ತಕ್ಷಣವೇ ಸಮೀಕ್ಷೆ ಆಪ್‌ನಲ್ಲಿ ಬೆಳೆ ನೋಂದಣಿ ಮಾಡಿಕೊಳ್ಳುವುವಂತೆ ಸಹಾಯಕ ಕೃಷಿ ನಿರ್ದೇಶಕರು ತಿಳಿಸಿದ್ದಾರೆ.

## ಹರಪನಹಳ್ಳಿ ತಾ.ನಲ್ಲಿ ಮಳೆಯ ಅಬ್ಬರಕ್ಕೆ ನೆಲಕ್ಕುರುಳಿದ ಮರ : ಮೇಲ್ಛಾವಣಿ ಕುಸಿತ



ಹರಪನಹಳ್ಳಿ, ಮೇ 6- ಗುಡುಗು, ಬಿರುಗಾಳಿ ಸಹಿತ ಸುರಿದ ಮಳೆಯ ಅಬ್ಬರಕ್ಕೆ ಮರಗಳು ನೆಲಕ್ಕುರುಳಿವೆ. ಮನೆಯ ಮೇಲ್ಛಾವಣಿಗಳು ಹಾರಿ ಹೋದ ಪರಿಣಾಮ ಅಪಾರ ನಷ್ಟವಾಗಿದೆ.

ಅರಸಿಕೇರಿ ಹೋಬಳಿಯ ಹಳ್ಳಿಕೇರಿ ಗ್ರಾಮದಲ್ಲಿ ಸುರಿದ ಭಾರೀ ಮಳೆಗೆ ಮನೆ ಸಂಪೂರ್ಣ ನೆಲಸಮವಾಗಿದೆ. ಹೊಸಹಳ್ಳಿ ಗ್ರಾಮದಲ್ಲಿ ಮನೆಯ ಮೇಲ್ಛಾವಣಿ ಕುಸಿದು, ತಗಡಿನ ಶೀಟ್‌ಗಳು ಹಾರಿ ಹೋಗಲಿವೆ. ತೆಲಿಗಿ ಹೋಬಳಿಯ ಶಿವಪುರ ಗ್ರಾಮದಲ್ಲಿ ವಾಸಿಸುತ್ತಿರುವ ಮನೆ, ಭಾಗಶಃ ಹಾನಿಯಾಗಿ ಅಪಾರ ನಷ್ಟ ಸಂಭವಿಸಿದೆ ಎಂದು ವರದಿಯಾಗಿದೆ.

ನೀಲಗುಂದ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಮಿಂಚು, ಗುಡುಗು, ಬಿರುಗಾಳಿ ಸಹಿತ ಮಳೆ ಜೋರಾಗಿ ಸುರಿದಿದ್ದು, ಗುಡುಗು ಸಿಡಿಲಿಗೆ ತಾಲ್ಲೂಕಿನಲ್ಲಿ ಯಾವುದೇ ಪ್ರಾಣಾಪಾಯವಾಗಿಲ್ಲ.

ಗ್ರಾಮದಲ್ಲಿ ತೆಂಗಿನ ಮರಕ್ಕೆ ಸಿಡಿಲು ಹೊಡೆದು ಬೆಂಕಿ ಕಾಣಿಸಿಕೊಂಡ ದೃಶ್ಯ ಜನರನ್ನು ಭಯಗೊಳಿಸಿದೆ. ಈ ದೃಶ್ಯ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಹರಪನಹಳ್ಳಿಯಲ್ಲಿ 16.4 ಎಂ.ಎಂ., ಅರಸಿಕೇರಿಯಲ್ಲಿ 3.2 ಎಂ.ಎಂ., ಉಚ್ಚಂಗಿದುರ್ಗದಲ್ಲಿ 54.4 ಎಂ.ಎಂ., ಹಿರೇಮೇಗಳಗೇರಿಯಲ್ಲಿ 14.2 ಎಂ.ಎಂ., ಚಿಗಟೇರಿಯಲ್ಲಿ 26.6 ಎಂ.ಎಂ., ತೆಲಿಗಿಯಲ್ಲಿ 36.2 ಎಂ.ಎಂ., ಹಲುವಾಗಿಲಿನಲ್ಲಿ 9.2 ಎಂ.ಎಂ., ಒಟ್ಟು 160.2 ಎಂ.ಎಂ ಮಳೆಯಾಗಿದೆ, ಸರಾಸರಿ ತಾಲ್ಲೂಕಿನಲ್ಲಿ 22.8 ಮಿಲಿ ಮೀಟರ್ ಮಳೆಯಾ ಗಿರುವ ವರದಿಯಾಗಿದೆ ಎಂದು ತಹಶೀಲ್ದಾರ್ ನಂದೀಶ್ ತಿಳಿಸಿದ್ದಾರೆ. ಮುಂಗಾರು ಮಳೆ ಜನರಲ್ಲಿ ನಿರೀಕ್ಷೆ ಮೂಡಿಸಿದ್ದು, ತಾಲ್ಲೂಕಿನ ಹೋಬಳಿ ಗಳ ರೈತರಲ್ಲಿ ಖುಷಿ ತಂದಿದೆ. ಕೃಷಿ ಚಟುವಟಿಕೆಗಳು ಚುರುಕುಗೊಂಡಿವೆ.

## ಎಲ್.ಐ.ಸಿ. ಪ್ರತಿನಿಧಿ ಎಂ.ಸಿ. ಶಿವಯೋಗಿ ನಿಧನ



ದಾವಣಗೆರೆ ಹಳೇಪೇಟೆ ವಾಸಿ ಎಲ್.ಐ.ಸಿ. ಹಿರಿಯ ಪ್ರತಿನಿಧಿ ಹಾಗೂ ಥೇರ್ಮನ್ ಕ್ಲಬ್ ಸದಸ್ಯರಾದ ಎಂ.ಸಿ. ಶಿವಯೋಗಿ (60) ಅವರು ದಿನಾಂಕ 6.05.2021 ರ ಗುರುವಾರ ರಾತ್ರಿ 7.30 ಕ್ಕೆ ನಿಧನರಾದರು. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿಯನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 6.05.2021 ರಂದು ರಾತ್ರಿ 9 ಕ್ಕೆ ಎಸ್.ಎಸ್. ಹೈಟೆಕ್ ಆಸ್ಪತ್ರೆ ಹಿಂಭಾಗದ ರುದ್ರಭೂಮಿಯಲ್ಲಿ ನೆರವೇರಿತು.

## ಜಿಲ್ಲಾ ಸಚಿವರು 15 ದಿನ ಜಿಲ್ಲೆಯಲ್ಲೇ ವಾಸ್ತವ್ಯ ಮಾಡಿ ಸಮಸ್ಯೆಗಳನ್ನು ಅರಿಯಲಿ


ದಾವಣಗೆರೆ,ಮೇ 6- ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ಅವರು ನಾಳೆ ಶುಕ್ರವಾರ ನಗರಕ್ಕೆ ಆಗಮಿಸಲಿದ್ದು, ಕನಿಷ್ಠ 15 ದಿನಗಳ ಕಾಲ ಜಿಲ್ಲೆಯಲ್ಲಿ ವಾಸ್ತವ್ಯ ಮಾಡಿ ಜಿಲ್ಲೆಯ ಕೊರೊನಾ ಸಮಸ್ಯೆಗಳನ್ನು ಅರಿಯಬೇಕು ಎಂದು ಕರ್ನಾಟಕ ಏಕಾತ ವೇದಿಕೆ ಅಧ್ಯಕ್ಷ ಎನ್.ಹೆಚ್. ಹಾಲೇಶ್ ಒತ್ತಾಯಿಸಿದ್ದಾರೆ.

ಕೊರೊನಾ ಸೋಂಕು ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಜಿಲ್ಲೆಯ ಆಸ್ಪತ್ರೆಗಳಲ್ಲಿ ಬೆಡ್, ಆಕ್ಸಿಜನ್ ಪೂರೈಕೆ ಮತ್ತು ಜನಜೀವನ ಸಮಸ್ಯೆಗಳು, ಗೊಂದಲಗಳು ಸೃಷ್ಟಿಯಾಗಿದ್ದು, ಈ ಹಿನ್ನೆಲೆಯಲ್ಲಿ ಸಚಿವ ಬಸವರಾಜ್ ಅವರು ನಗರದಲ್ಲೇ ವಾಸ್ತವ್ಯ ಮಾಡಿ ಸರ್ಕಾರದಿಂದ ಅಗತ್ಯ ಸೌಲಭ್ಯಗಳನ್ನು ಒದಗಿಸುವಂತೆ ಹಾಲೇಶ್ ಕೇಳಿಕೊಂಡಿದ್ದಾರೆ.

## ಜೂ.1 ರಂದು ಕೇರಳಕ್ಕೆ ಮುಂಗಾರು

ನವದೆಹಲಿ, ಮೇ 6 – ಈ ಬಾರಿ ಮುಂಗಾರು ವಾಡಿಕೆಯಂತೆ ಜೂನ್ 1 ರಂದು ಕೇರಳ ತಲುಪಲಿದೆ ಎಂಬ ಮುನ್ಸೂಚನೆ ದೊರೆತಿರುವುದಾಗಿ ಭೂ ವಿಜ್ಞಾನ ಸಚಿವಾಲಯದ ಕಾರ್ಯದರ್ಶಿ ಎಂ. ರಾಜೀವನ್ ಹೇಳಿದ್ದಾರೆ.

## ಆರನೇ ವರ್ಷದ ಪುಣ್ಯಸ್ಮರಣೆ



ಜನನ : 01.07.1949
ಮರಣ : 07.05.2015

ಉಸಿರು ಹೋದರೂ ಹೆಸರು ಉಳಿಸಿದ

**ಶ್ರೀ ಪಿ. ರಾಮನಗೌಡ್ರು**

ಹಿರಿಯ ವಕೀಲರು ಹಾಗೂ ಅಧ್ಯಕ್ಷರು, ಡಿಡಿಸಿಸಿ ಬ್ಯಾಂಕ್, (2013-2015) ದಾವಣಗೆರೆ ಜಿಲ್ಲೆ.

ನೀವು ನಮ್ಮನ್ನಗಲಿ ಇಂದಿಗೆ ಆರು ವರ್ಷಗಳಾದವು.
ನಿಮ್ಮ ಸವಿ ನೆನಪು ನಮ್ಮ ಮನದಂಗಳದಲ್ಲಿ ಸದಾ ಹಚ್ಚ ಹಸಿರಾಗಿದೆ.
ನಿಮ್ಮ ದಿವ್ಯ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ನೀಡಲಿ ಎಂದು ಪ್ರಾರ್ಥಿಸುವ

✦ ಪತ್ನಿ : ಶ್ರೀಮತಿ ಪಿ. ಕೊಟ್ರಮ್ಮ ರಾಮನಗೌಡ್ರು
✦ ಶ್ರೀಮತಿ ಮಮತಾ, ಶ್ರೀ ಜಿ.ಎಸ್. ಸುರೇಶ್,
✦ ಶ್ರೀಮತಿ ಆಶಾ, ಶ್ರೀ ಪಿ. ಪ್ರೇಮ್‌ಕುಮಾರ್
✦ ಶ್ರೀ ಪಿ. ವೀರನಗೌಡ
✦ ಮೊಮ್ಮಕ್ಕಳು : ಜಿ.ಎಸ್. ವರ್ಷಿಣಿ, ಜಿ.ಎಸ್. ವೈಷ್ಣವಿ, ಪಿ. ರಾಹುಲ್‌ಗೌಡ, ಪಿ. ಹಿಮಾ
ಹಾಗೂ ಚಿಗಟೇರಿ ಪರಶುರಾಮಪ್ಪನವರ ವಂಶಸ್ಥರು ಹಾಗೂ ಬಂಧು-ಮಿತ್ರರು.

## ಶ್ರೀಮತಿ ಕೆಂಚಮ್ಮ ನಿಧನ



ದಾವಣಗೆರೆ ತಾಲ್ಲೂಕು ಕೆರೆಯಾಗಳಹಳ್ಳಿ ಗ್ರಾಮದ ವಾಸಿ ನಾಗಪ್ಪ ಇವರ ಧರ್ಮಪತ್ನಿ

**ಶ್ರೀಮತಿ ಕೆಂಚಮ್ಮ (68)**

ಅವರು, ದಿನಾಂಕ 06.05.2021ರಂದು ಗುರುವಾರ ರಾತ್ರಿ 9.20 ಕ್ಕೆ ನಿಧನರಾದರು.

ಪತಿ, ಓರ್ವ ಪುತ್ರ, ಮೂವರು ಪುತ್ರಿಯರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 07.05.2021 ರಂದು ಶುಕ್ರವಾರ ಮಧ್ಯಾಹ್ನ 12.30 ಕ್ಕೆ ಕೆರೆಯಾಗಳಹಳ್ಳಿಯಲ್ಲಿ ನೆರವೇರಲಿದೆ.

- ಇಂತಿ ದುಃಖತಪ್ತ ಕುಟುಂಬ ವರ್ಗ

**ಎ.ಕೆ. ಹಾಲಪ್ಪ**

ನಿವೃತ್ತ ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೆಪಿಟಿಸಿಎಲ್,
ಅಳಿಯಂದಿರು, ಮಕ್ಕಳು, ಮೊಮ್ಮಕ್ಕಳು.
ಮೊಬೈಲ್ : 94498 09621

## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 06.05.2021ರಂದು ನಿಧನರಾದ ಜಗಳೂರು ತಾಲ್ಲೂಕು ಕೊಡದಗುಡ್ಡ ಗ್ರಾಮದ ಶ್ರೀ ವೀರಭದ್ರಸ್ವಾಮಿ ಟ್ರಸ್ಟ್ ಅಧ್ಯಕ್ಷರಾದ

**ಶ್ರೀ ಬಿಳಿಚೋಡು ಶೆಟ್ರು ಉಮೇಶ್**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.

ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

**ಬಿಳಿಚೋಡು ಶೆಟ್ರು ಕೊಟ್ರಬಸಪ್ಪ ಮತ್ತು ಮಕ್ಕಳು, ಬಿಳಿಚೋಡು ಶೆಟ್ರು ವಂಶಸ್ಥರು, ದಾವಣಗೆರೆ**

## ದರೂರು ಕಟ್ಟಿಮನಿ ಡಿ.ಹೆಚ್. ವೆಂಕಟೇಶ್ ನಿಧನ



ದಾವಣಗೆರೆ ಸಿಟಿ ಕೆ.ಬಿ ಬಡಾವಣೆ 5ನೇ ಕ್ರಾಸ್ ವಾಸಿ ದರೂರು ಕಟ್ಟಿಮನಿ ಡಿ.ಹೆಚ್. ವೆಂಕಟೇಶ್ (58) ಇವರು ದಿನಾಂಕ 5.5.2021ರ ಬುಧವಾರ ಬೆಳಿಗ್ಗೆ 9.30 ಕ್ಕೆ ಹೃದಯಾಘಾತದಿಂದ ನಿಧನರಾದರು. ಪತ್ನಿ, ಪುತ್ರಿ, ಇಬ್ಬರು ಪುತ್ರರು ಹಾಗೂ ಅಪಾರ ಬಂಧು - ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 05-05-2021ರ ಬುಧವಾರ ಸಂಜೆ 5 ಗಂಟೆಗೆ ನಗರದ ಹಿಂದೂ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು.

## ಅಶ್ರುತರ್ಪಣ



ದಿನಾಂಕ 06.05.2021ರಂದು ನಿಧನರಾದ ಜಗಳೂರು ತಾಲ್ಲೂಕು ಕೊಡದಗುಡ್ಡ ಗ್ರಾಮದ ಶ್ರೀ ವೀರಭದ್ರಸ್ವಾಮಿ ಟ್ರಸ್ಟ್ ಅಧ್ಯಕ್ಷರಾದ

**ಶ್ರೀ ಬಿಳಿಚೋಡು ಶೆಟ್ರು ಉಮೇಶ್**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.

ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

✦ ರಮೇಶ್ ಉಳ್ಳಾಲ್
✦ ದೇವರಮನಿ ವಿಜಯಕುಮಾರ್
✦ ಶ್ರೀ ಬಸವೇಶ್ವರ ಸ್ಟೀಲ್ಸ್, ಟೋಲ್‌ನಾಕ, ಧಾರವಾಡ.
✦ ಶಿವನಳ್ಳಿ ರಮೇಶಣ್ಣ ವಾಯುವಿಹಾರ ಬಳಗ ದಾವಣಗೆರೆ.

## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 06.05.2021ರಂದು ನಿಧನರಾದ ಜಗಳೂರು ತಾಲ್ಲೂಕು ಕೊಡದಗುಡ್ಡ ಗ್ರಾಮದ ಶ್ರೀ ವೀರಭದ್ರಸ್ವಾಮಿ ಟ್ರಸ್ಟ್ ಅಧ್ಯಕ್ಷರಾದ

**ಶ್ರೀ ಬಿಳಿಚೋಡು ಶೆಟ್ರು ಉಮೇಶ್**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.

ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

ಅಧ್ಯಕ್ಷರು ಮತ್ತು ಪದಾಧಿಕಾರಿಗಳು ಹಾಗೂ ಸರ್ವ ಸದಸ್ಯರು

**ದೊಡ್ಡಪೇಟೆ ಶ್ರೀ ಬಸವೇಶ್ವರ ಸೇವಾ ಸಂಘ**
**ಶ್ರೀ ಬಸವೇಶ್ವರ ಮತ್ತು ಶ್ರೀ ದಾನಮ್ಮದೇವಿ ದೇವಸ್ಥಾನ**
ದೊಡ್ಡಪೇಟೆ, ದಾವಣಗೆರೆ.

## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 06.05.2021 ರಂದು ನಿಧನರಾದ

**ಶ್ರೀ ಬಿಳಿಚೋಡು ಶೆಟ್ರು ಉಮೇಶ್**

(ಅಧ್ಯಕ್ಷರು, ಶ್ರೀ ವೀರಭದ್ರ ಸ್ವಾಮಿ ದೇವಸ್ಥಾನ ಟ್ರಸ್ಟ್)

ಅವರ ಆತ್ಮಕ್ಕೆ ಶಾಂತಿ ಸಿಗಲೆಂದು ಹಾಗೂ ಅವರ ಕುಟುಂಬ ವರ್ಗಕ್ಕೆ ದುಃಖವನ್ನು ಸಹಿಸುವ ಶಕ್ತಿಯನ್ನು ಕರುಣಿಸಲೆಂದು ಆ ದೇವರಲ್ಲಿ ಪ್ರಾರ್ಥಿಸುತ್ತೇವೆ. ಅವರ ಆತ್ಮಕ್ಕೆ ಚಿರ ಶಾಂತಿಯನ್ನು ಕೋರುವವರು :

**ಶ್ರೀ ವೀರಭದ್ರ ಸ್ವಾಮಿ ದೇವಸ್ಥಾನ ಟ್ರಸ್ಟ್ ಕಮಿಟಿ**
ಕೊಡದಗುಡ್ಡ, ಜಗಳೂರು ತಾಲ್ಲೂಕು.

# ಮಲೇಬೆನ್ನೂರಿನಲ್ಲಿ ಟೆಸ್ಟಿಗೆ ಸಂಪರ್ಕಿತರ ಹಿಂದೇಟು : ಅಧಿಕಾರಿಗಳಿಂದ ಮನವೊಲಿಕೆ



ಮಲೇಬೆನ್ನೂರು, ಮೇ 6- ಪಟ್ಟಣದ 8ನೇ ವಾರ್ಡ್‌ನಲ್ಲಿ ಕೊರೊನಾ ಸೋಂಕಿತ ವ್ಯಕ್ತಿಯ ಪ್ರಥಮ ಮತ್ತು ದ್ವಿತೀಯ ಸಂಪರ್ಕಿತರು ಗಂಟಲು ದ್ರವ ಪರೀಕ್ಷೆಗೆ ಹಿಂದೇಟು ಹಾಕಿದ್ದರಿಂದ ಅಧಿಕಾರಿಗಳು ಅವರ ಮನವೊಲಿಸಲು ಹರಸಾಹಸಪಟ್ಟರು.

ಮನವೊಲಿಕೆಗೆ ಬಗ್ಗದಿದ್ದಾಗ ರೇಷನ್ ಸ್ಥಗಿತ ಮಾಡಿಸುತ್ತೇವೆ ಎಂದು ಹೇಳಿದಾಗ ಸುಮಾರು 20 ಜನರು ಕೋವಿಡ್ ಟೆಸ್ಟ್ ಮಾಡಿಸಿಕೊಂಡರು.

**ಮನವಿ :** ಕೊರೊನಾ ಸೋಂಕಿತ ವ್ಯಕ್ತಿಯ ಪ್ರಥಮ ಹಾಗೂ ದ್ವಿತೀಯ ಸಂಪರ್ಕಿತರು ಕೋವಿಡ್ ಟೆಸ್ಟ್ ಮಾಡಿಸಿಕೊಂಡರೆ ಮಾತ್ರ ಕೊರೊನಾ ಚೈನ್ ಲಿಂಕ್ ತಪ್ಪಿಸಬಹುದು. ಇಲ್ಲದಿದ್ದರೆ ಅದು ಬೆಳೆಯುತ್ತಲೇ ಇರುತ್ತದೆ ಎಂದು ಉಪತಹಶೀಲ್ದಾರ್ ಆರ್.ರವಿ ಜನರಲ್ಲಿ ಮನವಿ ಮಾಡಿದ್ದಾರೆ.

ಪುರಸಭೆ ಮುಖ್ಯಾಧಿಕಾರಿ ದಿನಕರ್ ಪುರಸಭೆ ಅಧಿಕಾರಿಗಳಾದ ಉಮೇಶ್, ಗುರುಪ್ರಸಾದ್, ನವೀನ್, ಪ್ರಭು ಮತ್ತು ಆರೋಗ್ಯ ಇಲಾಖೆ ಸಿಬ್ಬಂದಿ ಈ ವೇಳೆ ಹಾಜರಿದ್ದರು.

**77 ಜನರಿಗೆ ಸೋಂಕು :** ಬುಧವಾರ ಹರಿಹರ ತಾಲ್ಲೂಕಿನಲ್ಲಿ 77 ಜನರಿಗೆ ಸೋಂಕು ದೃಢಪಟ್ಟಿದ್ದು, ಇದರಲ್ಲಿ ಮಲೇಬೆನ್ನೂರು ಹೋಬಳಿಯ 20 ಜನರು ಇದ್ದಾರೆ. ಹೊಳೆಸಿರಿಗೆರೆ ಗ್ರಾಮದ 60 ವರ್ಷದ ಮಹಿಳೆ ಚಿಕಿತ್ಸೆ ಫಲಕಾರಿಯಾಗದೇ ದಾವಣಗೆರೆ ಸಿಜಿ ಆಸ್ಪತ್ರೆಯಲ್ಲಿ ಕೊರೊನಾ ಸೋಂಕಿಗೆ ಬಲಿಯಾಗಿದ್ದಾರೆ.

## ವಿಪತ್ತಿನ ಸಮಯದಲ್ಲಿ ವದಂತಿ ಹರಡಿದರೆ ಕ್ರಮ : ಎಸ್ಪಿ

**(1ನೇ ಪುಟದಿಂದ)** ಸಂಬಂಧಿಸಿದಂತೆ ನೆರವು ಬೇಕಾದಾಗ ಜನರು ಸಹಾಯವಾಣಿಯಾದ 112 ಬಳಸಿಕೊಳ್ಳಬಹುದು ಎಂದು ಹೇಳಿದ ಎಸ್ಪಿ, ಆಕ್ಸಿಜನ್, ಬೆಡ್, ರೆಮ್‌ಡಿಸಿವಿರ್ ಮುಂತಾದ ವಿಷಯಗಳಿಗೆ ಸಂಬಂಧಿಸಿದಂತೆ ಸಹಾಯವಾಣಿ ಬಳಕೆ ಮಾಡಿಕೊಳ್ಳಬಹುದು ಎಂದು ಇದೇ ಸಂದರ್ಭದಲ್ಲಿ ಹೇಳಿದರು.

# ಜನರ ಪ್ರಾಣ ರಕ್ಷಣೆಗೆ ಕಟ್ಟುನಿಟ್ಟಿನ ಕ್ರಮ ಅನಿವಾರ್ಯ

ಹೊನ್ನಾಳಿ, ಮೇ 6- ಕೊರೊನಾ ಸಂಕಷ್ಟದಿಂದ ಜನರ ಪ್ರಾಣ ರಕ್ಷಣೆ ಮಾಡದಿದ್ದರೆ ಜನ ಪ್ರತಿನಿಧಿಯಾಗಿ ಹಾಗು ಅಧಿಕಾರಿಯಾಗಿದ್ದು ಏನು ಪ್ರಯೋಜನ? ನಾಳೆಯಿಂದ ಪೊಲೀಸರು ಹಾಗೂ ಅಧಿಕಾರಿಗಳು ಕೊರೊನಾ ನಿಯಮ ಪಾಲಿಸದ ವ್ಯಕ್ತಿಗಳಿಗೆ ಲಾಠಿ ಚಾರ್ಜ್ ಹಾಗೂ ದಂಡ ಸೇರಿದಂತೆ ಯಾವುದೇ ಕಠಿಣ ನಿಯಮವಿದ್ದರೂ ಪಾಲಿಸುವ ಮೂಲಕ ತಾಲ್ಲೂಕಿನ ಕೊರೊನಾ ಸಾವಿನ ಪ್ರಮಾಣ ತಡೆಹಿಡಿಯಬೇಕೆಂದು ಶಾಸಕರು ಹೇಳಿದರು.

ಹೊನ್ನಾಳಿ ತಾಲ್ಲೂಕು ಕಛೇರಿಯಲ್ಲಿ ವರ್ತಕರು ಹಾಗೂ ತರಕಾರಿ ವ್ಯಾಪಾರಿಗಳೊಂದಿಗೆ ನಡೆದ ಸಭೆಯನ್ನುದ್ದೇಶಿಸಿ ಮಾತನಾಡಿದರು.

ಮಾಸ್ಕ್ ಹಾಕದೆ, ಅಂತರ ಕಾಪಾಡಿಕೊಳ್ಳದೆ ಕೊರೊನಾ ನಿವಾರಣೆಯ ನಿಯಮ ಉಲ್ಲಂಘಿಸುವ ವ್ಯಕ್ತಿಗಳಿಗೆ ನಾನು ಇನ್ನು ಮುಂದೆ ಯಾವುದೇ ರಕ್ಷಣೆ ನೀಡುವುದಿಲ್ಲ. ಏಕೆಂದರೆ ತಾಲ್ಲೂಕಿನಲ್ಲಿ ಪರಿಸ್ಥಿತಿ ಕೈ ಮೀರುತ್ತಿರುವ ಆತಂಕ ಕಂಡುಬರುತ್ತಿದೆ.

ಬೇಡಿಕೆಗೆ ತಕ್ಕಂತೆ ಬೆಡ್‌ಗಳ ಕೊರತೆ ಎದುರಾಗಬಹುದು. ಇದಕ್ಕೆಲ್ಲ ಕಡಿವಾಣ ಹಾಕಲು ಇರುವ ಒಂದೇ ಒಂದು ಮಾರ್ಗವೆಂದರೆ ಕೊರೊನಾ ಹರಡುವಿಕೆಯ ಚೈನ್ ಲಿಂಕ್ ತಪ್ಪಿಸುವುದಷ್ಟೆ.

ಇದಕ್ಕಾಗಿ ನಾಳೆಯಿಂದಲೇ ನಾವು ನಿಯಮ ಉಲ್ಲಂಘಿಸುವ ಯಾವುದೇ ವ್ಯಕ್ತಿಗಳು ದೂರವಾಣಿಯಲ್ಲಿ ಸಂಪರ್ಕಿಸಲು ಮುಂದಾದರೆ ನನ್ನಿಂದ ಯಾವುದೇ ಸಹಾಯ ದೊರಕದು. ಜನತೆಯ ಪ್ರಾಣ ಉಳಿಸುವುದು ಇಲ್ಲಿ ಅತಿಮುಖ್ಯವಾಗಬೇಕು.

ಅಂಗಡಿ ವ್ಯಾಪಾರಿಗಳು ಒಂದು ದಿನದ ಒಳಗಾಗಿ ಬಾಕ್ಸ್‌ಗಳನ್ನು ಹಾಕಿಕೊಂಡು, ಅಂತರ ಕಾಪಾಡಿ, ನಿಯಮ ಪಾಲನೆಯಿಂದ ವ್ಯಾಪಾರ ಮಾಡಬೇಕು. ಇಲ್ಲವಾದಲ್ಲಿ ನಿಮ್ಮ ಆರೋಗ್ಯ ನಿಮ್ಮ ಕುಟುಂಬಗಳು ಉಳಿಯುವುದು ಕಷ್ಟವಾಗಬಹುದೆಂದು ವಿವರಿಸಿ, ನಿಯಮ ಪಾಲಿಸಲು ಅಧಿಕಾರಿಗಳು ಕ್ರಮ ಕೈಗೊಳ್ಳಬೇಕೆಂದರು.



**ಲಾಠಿ ಚಾರ್ಜ್, ದಂಡ ಹಾಕುವುದರ ಮೂಲಕವಾದರೂ ಸರಿ, ದಿಟ್ಟ ಕ್ರಮದಿಂದ ಕೊರೊನಾ ಹತೋಟಿಗೆ ತರುವಂತೆ ಹೊನ್ನಾಳಿ ಶಾಸಕ ಎಂ.ಪಿ. ರೇಣುಕಾಚಾರ್ಯ ಖಡಕ್ ಸಂದೇಶ**

ತರಕಾರಿ ಮಾರುಕಟ್ಟೆಯನ್ನು ಎಪಿಎಂಸಿ ಆವರಣದಲ್ಲಿ ನಡೆಸಲು ಕ್ರಮ ಕೈಗೊಳ್ಳುತ್ತಿದ್ದು, ಎಪಿಎಂಸಿಯಲ್ಲಿ ನಾಳೆ ಬೆಳಿಗ್ಗೆ 8 ಗಂಟೆಗೆ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳೊಂದಿಗೆ ತಾವು ಭೇಟಿ ನೀಡುವೆ, ವ್ಯಾಪಾರಿಗಳು ಅಲ್ಲಿ 30 ಅಡಿ ಅಂತರದಲ್ಲಿ ಅಂಗಡಿ ನಿರ್ಮಿಸಿಕೊಂಡು ವಹಿವಾಟು ನಡೆಸಬೇಕೆಂದರು.

ಮದುವೆ ಮನೆಯಲ್ಲಿ ಹಾಗೂ ಶವ ಸಂಸ್ಕಾರದಲ್ಲಿ ನಿಯಮವನ್ನು ಗಾಳಿಗೆ ತೂರಲಾಗಿದ್ದು, ಇವೆರಡೂ ಕಡೆ ಕೊರೊನಾ ಚೈನ್ ಲಿಂಕ್ ಮುಂದುವರೆಯುತ್ತಿದೆ. ಇದಕ್ಕೆ ಕಡಿವಾಣ ಹಾಕದಿದ್ದರೆ ತಮಗೂ ಸೇರಿದಂತೆ ಸರ್ಕಾರಕ್ಕೆ ಹಾಗೂ ತಾಲ್ಲೂಕು ಆಡಳಿತಕ್ಕೆ ಕೆಟ್ಟ ಹೆಸರು ಬರಲಿದೆ. ಎಲ್ಲದಕ್ಕೂ ಅಧಿಕಾರಿಗಳು ದಿಟ್ಟತನದ ಕ್ರಮಕ್ಕೆ ಮುಂದಾಗಿ ಎಂದು ಖಡಕ್ ಸಂದೇಶ ನೀಡಿದರು.

ಸಭೆಯಲ್ಲಿ ವರ್ತಕರಾದ ಜಗದೀಶ್, ರುದ್ರೇಶ್, ಶಿವಕುಮಾರ ಮಠದ್, ವೀರೇಶ್, ಅಂದಾನಿ ರಾಕೇಶ್, ಗಂಗಾಧರ್, ಜಗಣ್ಣ, ಮಹೇಶ್, ಮುತ್ತಣ್ಣ ಸೇರಿದಂತೆ ತಾಲ್ಲೂಕಿನ ಅಧಿಕಾರಿ ವರ್ಗದವರು ಉಪಸ್ಥಿತರಿದ್ದರು.

# ಜೈಲು ಹಕ್ಕಿಗಳಿಗೆ ಸಿಗದ ಕೋವಿಡ್ - 19 ಲಸಿಕೆ ಭಾಗ್ಯ

**ಜಿ.ಎಸ್.ವಸಂತ್ ಕುಮಾರ್**

ದಾವಣಗೆರೆ, ಮೇ 6- ಕೊರೊನಾ ಸೋಂಕಿಗೆ ತುತ್ತಾಗದಿರಲು ಮುಂಜಾಗ್ರತೆಗಾಗಿ ನಗರದಲ್ಲಿನ ಜಿಲ್ಲಾ ಕಾರಾಗೃಹದಲ್ಲಿ ಜೈಲು ಹಕ್ಕಿಗಳೂ ಮೊದಲ ಲಸಿಕೆ ಭಾಗ್ಯ ಕಂಡಿದ್ದಾರೆ. ಆದರೆ, ಲಸಿಕೆ ಖಾಲಿ ಒಂದೆಡೆಯಾದರೆ, ಕೆಲವರ ಬಳಿ ಆಧಾರ್ ಕಾರ್ಡ್ ಇಲ್ಲದ ಕಾರಣ ಎಲ್ಲಾ ಜೈಲು ಹಕ್ಕಿಗಳಿಗೂ ಲಸಿಕೆ ಭಾಗ್ಯ ಸಿಕ್ಕಿಲ್ಲ.

45 ವರ್ಷ ಮೇಲ್ಪಟ್ಟ 13 ಮಂದಿ ಖೈದಿಗಳಿಗೆ ಇತ್ತೀಚೆಗೆ ಮೊದಲ ಲಸಿಕೆ ಹಾಕಿಸಲಾಗಿದೆ. ಲಸಿಕೆ ಹಾಕಿಸಲು ಕೆಲವರ ಆಧಾರ್ ಕಾರ್ಡ್ ಇಲ್ಲ. ಈ ಬಗ್ಗೆ ಮೇಲಾಧಿಕಾರಿಗಳ ಗಮನಕ್ಕೆ ತರಲಾಗಿದೆ. ಸದ್ಯಕ್ಕೆ ಕೊರೊನಾ ಲಸಿಕೆ ಖಾಲಿಯಾಗಿರುವ ಕಾರಣ ಆಧಾರ್ ಕಾರ್ಡ್ ವುಳ್ಳ ಉಳಿದ ಖೈದಿಗಳಿಗಾದರೂ ಲಸಿಕೆ ಹಾಕಿಸಲು ಆಗದಂತಾಗಿದೆ ಎನ್ನುತ್ತಾರೆ ಕಾರಾಗೃಹದ ಸಹಾಯಕ ಅಧೀಕ್ಷಕ ಕರ್ಣ ಬಿ. ಕ್ಷತ್ರಿ.

ಇದೇ ಏ.27ರಂದು 219 ಮಂದಿ ಖೈದಿ ಗಳಿದ್ದರು. ಅಂದಿನಿಂದ ಮಂಗಳವಾರದವರೆಗೆ 22 ಮಂದಿ ಜಾಮೀನು ಪಡೆದು ಬಿಡುಗಡೆ ಹೊಂದಿದ್ದು, ನಿನ್ನೆ ಸಹ 3 ಮಂದಿ ಹೊಸ ಖೈದಿಗಳು ಬಿಡುಗಡೆಗೊಂಡಿದ್ದಾರೆ. ಸದ್ಯಕ್ಕೆ ಒಟ್ಟು 194 ಹಳೆಯ ಮತ್ತು ಹೊಸ ಖೈದಿಗಳು ಜೈಲಿನಲ್ಲಿದ್ದಾರೆ. ಸಾಮಾನ್ಯವಾಗಿ ಖೈದಿಗಳಿಗೆ ಜಾಮೀನು ಸಿಗುತ್ತಿದೆ. ಲಾಕ್ ಡೌನ್ ಕಾರಣ ಹೊಸ ಖೈದಿಗಳ ಪ್ರವೇಶ ಕಡಿಮೆ ಆಗಿದೆ ಎಂದು ಕರ್ಣ ಅವರು 'ಜನತಾವಾಣಿ'ಗೆ ಮಾಹಿತಿ ನೀಡಿದರು.

ಜೈಲಿನಲ್ಲಿ ಒಟ್ಟು 12 ಸೆಲ್ ಗಳಿವೆ. 10 ಸೆಲ್‌ಗಳು, ಎರಡು ಬ್ಯಾರಕ್ (ವಿಶಾಲವಾದ ಸೆಲ್‌ಗಳು) ಇವೆ.




**ಮೊದಲ ಕೋವಿಡ್ ಲಸಿಕೆ ಪಡೆದ 13 ಖೈದಿಗಳು**

ಖೈದಿಗಳನ್ನು ನಿಯಮಾ ನುಸಾರ ಸೆಲ್ ಗಳಲ್ಲಿ ಇರಿಸಲಾಗುತ್ತಿದೆ.

**ಸಿಬ್ಬಂದಿಗಳಿಗೆಲ್ಲಾ ಎರಡೂ ಹಂತದ ಲಸಿಕೆ:** ಜೈಲಿನ 42 ಮಂದಿ ಅಧಿಕಾರಿಗಳು ಮತ್ತು ಸಿಬ್ಬಂದಿಗಳೆಲ್ಲಾ ಕಳೆದ 2-3 ತಿಂಗಳ ಹಿಂದೆಯೇ ಎರಡೂ ಹಂತದ ಲಸಿಕೆ ಪಡೆದಿದ್ದಾರೆ.

**ಎಸ್‌ಓಪಿ ಪಾಲನೆಯಿಂದ ಕಾರಾಗೃಹ ಸೇಫ್:** ಜಿಲ್ಲಾ ಅಧೀಕ್ಷಕರ ಸೂಚನೆಯಂತೆ ಜಿಲ್ಲಾ ಕಾರಾಗೃಹದಲ್ಲಿ ಎಲ್ಲಾ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಆ ಮೂಲಕ ಸದ್ಯಕ್ಕೆ ಇದುವರೆಗೂ ಕಾರಾಗೃಹದಲ್ಲಿ ಕೊರೊನಾ ಸೋಂಕಿನ ಸುಳಿವಿಲ್ಲ ಎನ್ನುತ್ತಾರೆ ಕರ್ಣ.

ಪ್ರಮಾಣಿತ ಕಾರ್ಯಾಚರಣೆ ವಿಧಾನದ (ಎಸ್‌ಓಪಿ) ಅನ್ವಯ ಕ್ರಮ ಕೈಗೊಳ್ಳಲು ಕಾರಾಗೃಹದಲ್ಲಿ ಸ್ವಚ್ಛತೆಗೆ ಮೊದಲ ಆದ್ಯತೆ ನೀಡ ಲಾಗಿದೆ. ಎಲ್ಲಾ ಬಂಧಿಗಳಿಗೆ ಮಾಸ್ಕ್ ವಿತರಿ ಸಿದ್ದು, ಧರಿಸಲು ಸೂಚಿಸಿದೆ. ಬಂಧಿಗಳಿಗೆ ಸ್ಯಾನಿ ಟೈಜರ್ ವಿತರಿಸಿದ್ದು, ಆಗಾಗ ಕೈತೊಳೆದು ಕೊಳ್ಳಲು ಸೂಚಿಸಿದೆ ಎಂದು ವಿವರಿಸಿದರು.

ಕರ್ತವ್ಯ ನಿರತ ಸಿಬ್ಬಂದಿಗಳಿಗೆ ಕಡ್ಡಾಯ ವಾಗಿ ಮಾಸ್ಕ್ ಧರಿಸಲು ಸೂಚಿಸಲಾಗಿದೆ. ಮಾಸ್ಕ್ ಮತ್ತು ಫೇಸ್‌ಶೀಲ್ಡ್‌ಗಳನ್ನು ಎಲ್ಲಾ ಸಿಬ್ಬಂದಿಗಳಿಗೆ ವಿತರಿಸಲಾಗಿದೆ. ಈಗಾಗಲೇ ಬಂಧಿಗಳಿಗೆ ಸಂದರ್ಶನ ನಿಲ್ಲಿಸಲಾಗಿದೆ. ಅಧಿ ಕಾರಿ ಮತ್ತು ಸಿಬ್ಬಂದಿಗಳೂ ಕಾರಾಗೃಹದ ಒಳ ಪ್ರವೇಶ ಮಾಡಿದಾಗ ಥರ್ಮಲ್ ಸ್ಕ್ರೀನಿಂಗ್ ಮಾಡಲಾಗುತ್ತದೆ. ಪ್ರತಿ ದಿನ ಎಲ್ಲಾ ಬಂಧಿಗಳ ದೈಹಿಕ ಉಷ್ಣತೆಯನ್ನು ಪರೀಕ್ಷಿಸಲಾಗುತ್ತಿದೆ. ಕಾರಾಗೃಹದ ಒಳಭಾಗದಲ್ಲಿ ಮತ್ತು ಹೊರಭಾಗದಲ್ಲಿ ಪ್ರತಿ ನಿತ್ಯ ಬೆಳಿಗ್ಗೆ ಮತ್ತು ಸಂಜೆ 2 ಬಾರಿ ಸೋಂಕು ನಿವಾರಕ ದ್ರಾವಣವನ್ನು ಸಿಂಪಡಿಸಲಾಗುತ್ತಿದೆ ಎಂದರು.

ಹೊಸದಾಗಿ ಪ್ರವೇಶ ಪಡೆದ ಬಂಧಿಗಳಿಗೆ ಪ್ರತ್ಯೇಕ ಕೊಠಡಿ ಮಾಡಲಾಗಿದೆ. ಕಾರಾಗೃಹಕ್ಕೆ ದಾಖಲಾಗುವ ಬಂಧಿಗಳಿಗೆ ವೈದ್ಯಕೀಯ ತಪಾಸಣೆಯನ್ನು ಕಡ್ಡಾಯವಾಗಿ ಮಾಡಿಸಿಕೊಂಡು ವೈದ್ಯಕೀಯ ವರದಿ ನೀಡಲು ಬಂಧಿಗಳನ್ನು ಕಾರಾಗೃಹಕ್ಕೆ ತರುವ ಬೆಂಗಾವಲು ಸಿಬ್ಬಂದಿಗೆ ತಿಳಿಸಲಾಗಿದೆ. ನೆಗೆಟಿವ್ ವರದಿ ಇದ್ದರೆ ಅಷ್ಟೇ ಬಂಧಿಗಳನ್ನು ಕಾರಾಗೃಹದಲ್ಲಿ ದಾಖಲು ಮಾಡಿಕೊಳ್ಳಲಾಗುತ್ತಿದೆ. ಹೊಸದಾಗಿ ಪ್ರವೇಶ ಪಡೆದ ಬಂಧಿಗಳಿಗೆ ಮುಂಜಾಗ್ರತೆ ಹಿತದೃಷ್ಟಿಯಿಂದ ಐಸೋಲೇಷನ್ ವಾರ್ಡಿನಲ್ಲಿ ಇರಿಸಲಾಗುತ್ತಿದೆ.

ಕಾರಾಗೃಹದ ಔಷಧಿ ವಿಭಾಗದಲ್ಲಿ ಅಗತ್ಯ ಪ್ರಮಾಣದ ಔಷಧಿಗಳು ಮತ್ತು ಪ್ರಾಥಮಿಕ ಕಾಯಿಲೆಗೆ ಬಳಸುವ ಮೂಲಭೂತ ಔಷಧಿ ಗಳನ್ನು ಶೇಖರಿಸಲಾಗಿದೆ. ಕಾರಾಗೃಹಕ್ಕೆ ಭೇಟಿ ನೀಡುವ ಜಿಲ್ಲಾಸ್ಪತ್ರೆಯ ವೈದ್ಯಾಧಿಕಾರಿಗಳ ಸಲ ಹೆಯಂತೆ ಔಷಧಿಗಳನ್ನು ಬಂಧಿಗಳಿಗೆ ವಿತರಿಸ ಲಾಗುತ್ತಿದೆ. ಅಗ್ನಿ ಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯವರಿಂದ ವಾರಕ್ಕೊಮ್ಮೆ ಔಷಧಿ ಸಿಂಪಡಣೆ ಮಾಡಲಾಗುತ್ತಿದೆ ಎಂದರು.

ಕಾರಾಗೃಹದ ಮುಖ್ಯದ್ವಾರದ ಬಳಿ ಸುಸಜ್ಜಿತ ಅತ್ಯಾಧುನಿಕ ಸ್ವಯಂಚಾಲಿತ ಯಂತ್ರದೊಂದಿಗೆ ಸೋಂಕು ನಿವಾರಕ ಸುರಂಗ ನಿರ್ಮಿಸಲಾಗಿದೆ. ಅಗತ್ಯವಿರುವ ವೈದ್ಯಕೀಯ ಸಾಮಗ್ರಿಗಳನ್ನು ಖರೀದಿಸಲು ಬಿಡುಗಡೆ ಮಾಡಿರುವ ಅನುದಾನದಲ್ಲಿ ಅಗತ್ಯವಿರುವ ಪಿಪಿಇ ಕಿಟ್, ಹ್ಯಾಂಡ್ ಗ್ಲೌಸ್, ಮಾಸ್ಕ್, ಥರ್ಮಲ್ ಸ್ಕ್ರೀನಿಂಗ್ ಮೆಷಿನ್ ಕಿಟ್ ಸೇರಿದಂತೆ ಇತರೆ ಪರಿಕರಗಳನ್ನು ಖರೀದಿಸಿ, ಪೂರ್ಣ ಪ್ರಮಾಣದಲ್ಲಿ ಬಳಸಿಕೊಳ್ಳಲಾಗುತ್ತಿದೆ. ಎಲ್ಲ ಬಂಧಿಗಳಿಗೆ ಊಟ ವಿತರಣೆ ಮಾಡುವ ಸಂದರ್ಭದಲ್ಲಿ ಹಾಗೂ ಕೊಠಡಿಯಲ್ಲಿ ಅಂತರ ಕಾಯ್ದುಕೊಳ್ಳಲು ಸೂಚಿಸಿ, ಪರಿಶೀಲಿಸಲಾಗುತ್ತಿದೆ. ಕಾರಾಗೃಹದಲ್ಲಿ ಯಾವುದೇ ಸಂಘ, ಸಂಸ್ಥೆಗಳ ಕಾರ್ಯಕ್ರಮಗಳಿಗೆ ಅನುಮತಿ ನೀಡುತ್ತಿಲ್ಲ ಎಂದು ತಮ್ಮ ಕರ್ತವ್ಯ ಪಾಲನೆಯ ಅನುಭವ ಹಂಚಿಕೊಂಡರು.

**ಗ್ರಂಥಾಲಯದ ಕೊಠಡಿ ಬಂಧಿಗಳ ಬ್ಯಾಂಕ್ ಆಗಿ ಪರಿವರ್ತನೆ:** ಬಂಧಿಗಳಲ್ಲಿ ದೈಹಿಕ ಅಂತರ ಕಾಪಾಡಿಕೊಳ್ಳುವ ಉದ್ದೇಶದಿಂದ ಕಾರಾಗೃಹದ ಒಳಾವರಣದಲ್ಲಿರುವ ಗ್ರಂಥಾ ಲಯದ ಕೊಠಡಿಯನ್ನು ಬಂಧಿಗಳ ಬ್ಯಾಂಕ್ ಆಗಿ ಪರಿವರ್ತನೆಗೆ ಲೋಕೋಪಯೋಗಿ ಇಲಾಖೆ ದಾವಣಗೆರೆಯಿಂದ ಅಂದಾಜು ಪಟ್ಟಿ ಪಡೆದು ಬಿಲ್ಲು ತಯಾರಿಸಿ ಮೇಲು ರುಜುವಿಗಾಗಿ ಪ್ರಧಾನ ಕಛೇರಿಗೆ ಒಪ್ಪಿಸಲಾಗಿದೆ ಎಂದರು.

# ಅಣಬೇರು, ಬಾಡದಲ್ಲಿ ಮಳೆಗೆ ತೋಟ ಹಾನಿ : ಪರಿಹಾರಕ್ಕೆ ಒತ್ತಾಯ

ದಾವಣಗೆರೆ, ಮೇ 6- ಮಂಗಳವಾರ ಸುರಿದ ಮಳೆ ಗಾಳಿಗೆ ಹಾನಿಯಾಗಿರುವ ತೋಟಗಳಿಗೆ ಕೂಡಲೇ ಪರಿಹಾರ ನೀಡಬೇಕು ಎಂದು ಜಿಲ್ಲಾ ಪಂಚಾಯಿತಿ ಸದಸ್ಯ ಬಸವಂತಪ್ಪ ಒತ್ತಾಯಿಸಿದರು.

ಹೋಬಳಿಯ ಅಣಬೇರು ಮತ್ತು ಬಾಡ ಗ್ರಾಮಗಳಲ್ಲಿ ಮಳೆಗೆ ಹಾನಿಯಾದ ತೋಟಗಳಿಗೆ ಭೇಟಿ ನೀಡಿ ಅವರು ಮಾತನಾಡಿದರು. ಲಾಕ್‌ಡೌನ್‌ನಿಂದ ಬೆಳೆಗಳಿಗೆ ಬೆಲೆ ಇಲ್ಲದೆ ಕಂಗಾಲಾದ ರೈತರಿಗೆ ಅತಿವೃಷ್ಟಿಯಿಂದ ತೋಟ ಹಾಳಾಗಿರುವುದು ಗಾಯದ ಮೇಲೆ ಬರೆ ಎಳೆದಂತಾಗಿದೆ. ಕಳೆದ ವರ್ಷ ಇದೇ ತಿಂಗಳಲ್ಲಿ ಅತಿವೃಷ್ಟಿಯಿಂದ ಅಡಿಕೆ, ತೆಂಗಿನ ತೋಟ ಕಳೆದು ಕೊಂಡವರಿಗೆ ಪರಿಹಾರ ಸಿಕ್ಕಿಲ್ಲ. ಸರ್ಕಾರ ಪರಿಹಾರ ಒದಗಿಸಬೇಕೆಂದು ಅವರು ಆಗ್ರಹಿಸಿದರು.

ಅಣಬೇರಿನಲ್ಲಿ ಮಳೆಯಿಂದ ನೆಲಕ್ಕುರುಳಿದ ಅಡಿಕೆ ತೋಟಗಳನ್ನು ಮತ್ತು ನೀರು ಹರಿದು ಹಾಳಾದ ಭತ್ತದ ಗದ್ದೆಗಳನ್ನು ಪರಿಶೀಲಿಸಲಾಯಿತು.

ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ಎಂ.ಡಿ. ರುದ್ರಪ್ಪ, ಸದಸ್ಯರಾದ ಅನಿಲ್ ಕುಮಾರ್, ಮಾದಪ್ಪ, ಮುಖಂಡರಾದ ಜಾಫರ್ ಷರೀಫ್, ಮಾಳಿಗೇರ ಶಿವಜ್ಜ, ಚಿಗಟೇರಪ್ಪರ ಪ್ರಭಣ್ಣ, ಕುಳೇನೂರು ರೇವಣ್ಣ, ರೇವಣಸಿದ್ದಪ್ಪ, ಮಾಳಿಗೇರ ರೇವಣ್ಣ, ಚಂದ್ರಪ್ಪ ಮತ್ತಿತರರು ಇದ್ದರು.

## ರಾಜ್ಯಕ್ಕೆ ಹೆಚ್ಚಿನ ಆಕ್ಸಿಜನ್ ವಿರುದ್ಧ ಅರ್ಜಿ

ನವದೆಹಲಿ, ಮೇ 6 – ಕರ್ನಾಟಕಕ್ಕೆ ನೀಡಲಾಗುತ್ತಿರುವ ವೈದ್ಯಕೀಯ ಆಕ್ಸಿಜನ್ ಅನ್ನು ಈಗಿನ 965 ಮೆಟ್ರಿಕ್ ಟನ್‌ಗಳಿಂದ 1,200 ಮೆಟ್ರಿಕ್ ಟನ್‌ಗಳಿಗೆ ಹೆಚ್ಚಿಸುವಂತೆ ಕರ್ನಾಟಕ ಹೈಕೋರ್ಟ್ ಆದೇಶಿಸಿರುವುದನ್ನು ಪ್ರಶ್ನಿಸಿ ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟ್ ಮೊರೆ ಹೋಗಿದೆ.

ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಎದುರು ಅರ್ಜಿ ಮಂಡಿಸಿರುವ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತ, ರಾಜ್ಯಕ್ಕೆ ಪ್ರಸಕ್ತ 965 ಮೆಟ್ರಿಕ್ ಟನ್ ಆಕ್ಸಿಜನ್ ಪೂರೈಸಲಾಗುತ್ತಿದೆ. ಹೈಕೋರ್ಟ್ ಆದೇಶ ತಡೆಯಬೇಕೆಂದು ಮನವಿ ಮಾಡಿಕೊಂಡರು.

## ಪೊಲೀಸರಿಗೆ ಫೇಸ್ ಶೀಲ್ಡ್ ಮಾಸ್ಕ್



ದಾವಣಗೆರೆ, ಮೇ 6- ಸ್ಥಳೀಯ ದಕ್ಷಿಣ ಭಾಗದ ಸಂಚಾರಿ ಪೊಲೀಸ್ ಸಿಬ್ಬಂದಿಗಳಿಗೆ ಹಿರಿಯ ಸಹಕಾರಿ ಧುರೀಣರಾಗಿದ್ದ ದಿ. ಶಾಮನೂರು ಕಲ್ಲೇಶಪ್ಪನವರ ಪುತ್ರರೂ ಆದ ಎಪಿಎಂಸಿ ನಿರ್ದೇಶಕ ಎಸ್.ಕೆ. ಪವಿತ್ರ ಅವರು ಫೇಸ್ ಶೀಲ್ಡ್ ಮಾಸ್ಕ್ ಗಳನ್ನು ವಿತರಿಸಿದರು. ರೈತರ ಫಸಲುಗಳ ಪರಿವರ್ತನಾ ಮತ್ತು ವ್ಯಾಪಾರೋದ್ಯಮ ಸಹಕಾರ ಸಂಘದ ಅಧ್ಯಕ್ಷ ಜಿ.ಎಸ್. ಪರಮೇಶ್ವರ ಗೌಡ್ರು, ಮಾಜಿ ಕಾರ್ಯದರ್ಶಿ ಆರ್. ಗಂಗಾಧರಪ್ಪ, ಪಿ.ಎಸ್. ಸತೀಶ್ ಮತ್ತಿತರರು ಉಪಸ್ಥಿತರಿದ್ದರು.

## ಲಸಿಕೆಗಾಗಿ ಆಗಮಿಸಿದ ಜನರು

**(1ನೇ ಪುಟದಿಂದ)** ನಂತರ ದಾವಣಗೆರೆಯಿಂದ ಆಗಮಿಸಿದ್ದ ಸ್ವಲ್ಪ ಜನರಿಗೆ ಲಸಿಕೆ ಹಾಕಿಸಿದರು.

ಮಲೇಬೆನ್ನೂರು ಸಮುದಾಯ ಆರೋಗ್ಯ ಕೇಂದ್ರದಲ್ಲೂ ದಾವಣಗೆರೆಯ ಕೆಲವರು 2ನೇ ಡೋಸ್ ಪಡೆದುಕೊಂಡರು. ಇಲ್ಲಿನ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಕೋವ್ಯಾಕ್ಸಿನ್ ಲಸಿಕೆ ಹಾಕಿಸಿಕೊಂಡವರು 2ನೇ ಡೋಸ್‌ಗಾಗಿ ಸುಮಾರು 450 ಕ್ಕೂ ಹೆಚ್ಚು ಜನ ಪ್ರತಿನಿತ್ಯ ಆಸ್ಪತ್ರೆಗೆ ಅಲೆದಾಡುತ್ತಿದ್ದಾರೆ.

ಕಳೆದ 15 ದಿನಗಳಿಂದ ಕೋವ್ಯಾಕ್ಸಿನ್ ಲಸಿಕೆ ಬಂದಿಲ್ಲ. ಕೋವಿಶೀಲ್ಡ್ ಲಸಿಕೆ ಮಾತ್ರ ಬಂದಿರುತ್ತದೆ.

ಶನಿವಾರ ಅಥವಾ ಸೋಮವಾರ ಕೋವ್ಯಾಕ್ಸಿನ್ ಲಸಿಕೆ ಬರುವ ನಿರೀಕ್ಷೆಯಲ್ಲಿದ್ದೇವೆ. ಬಂದ ತಕ್ಷಣ 2ನೇ ಡೋಸ್‌ಗಾಗಿ ಕಾಯುತ್ತಿರುವವರಿಗೆ ಮೊದಲ ಆದ್ಯತೆ ನೀಡುವುದಾಗಿ ವೈದ್ಯಾಧಿಕಾರಿ ಡಾ. ಲಕ್ಷ್ಮಿ ದೇವಿ ತಿಳಿಸಿದ್ದಾರೆ.

## ಖಾತ್ರಿ ಯೋಜನೆಯಡಿ ಕೊಣಚಗಲ್ ಐತಿಹಾಸಿಕ ಪುಷ್ಕರಣೆಯ ಸ್ವಚ್ಛತೆ

**(1ನೇ ಪುಟದಿಂದ)** ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ ಹೂಳು ತೆಗೆಯುವುದು, ರೈತರ ಜಮೀನುಗಳಲ್ಲಿ ಬದು ನಿರ್ಮಾಣದಂತಹ ಕೆಲಸಗಳಿಗೆ ಆದ್ಯತೆ ನೀಡಲಾಗುತ್ತದೆ ಎಂದರು.

ಪಿಡಿಓ ಬಸವರಾಜಪ್ಪ ಮಾತನಾಡಿ ಐತಿಹಾಸಿಕ ಪುಷ್ಕರಣೆಯ ಹೂಳು ತೆಗೆದು ಸ್ವಚ್ಛತೆ ಮಾಡಿದ ಅಂದಾಜು ವೆಚ್ಚ 10 ಲಕ್ಷ ರೂ., ಎಡ ಭಾಗದ ದಂಡೆಯ ಅಭಿವೃದ್ಧಿಗೆ ಅಂದಾಜು 10 ಲಕ್ಷ ರೂ., ಗೋಕಟ್ಟೆ ಹೂಳೆತ್ತಲು 3 ಲಕ್ಷ ರೂ, ರಸ್ತೆ ಅಭಿ ವೃದ್ಧಿಗೆ 5 ಲಕ್ಷ ರೂ. ವೆಚ್ಚದಲ್ಲಿ ಕಾಮಗಾರಿಗಳನ್ನು ಖಾತ್ರಿ ಯೋಜನೆಯಡಿ ತೆಗೆದುಕೊಳ್ಳಲಾಗಿದೆ ಎಂದು ಅವರು ಮಾಹಿತಿ ನೀಡಿದರು.


ಈ ಸಂದರ್ಭದಲ್ಲಿ ತಾ.ಪಂ. ಎ.ಡಿ. ಶಿವಕುಮಾರ್, ಪಂಚಾಯ್ತಿ ಗ್ರಾ.ಪಂ. ಅಧ್ಯಕ್ಷ ಬಸವನಗೌಡ. ಸಿದ್ದಿಕಿ ಇತರರು ಉಪಸ್ಥಿತರಿದ್ದರು.

## ಕಸಾಪ ಸಂಸ್ಥಾಪನಾ ದಿನ : ಶುಭಾಶಯ



ದಾವಣಗೆರೆ, ಮೇ 6- ಮೇ 5 ಕನ್ನಡ ಸಾಹಿತ್ಯ ಪರಿಷತ್ತಿನ ಸಂಸ್ಥಾಪನಾ ದಿನಾಚರಣೆಯಾಗಿದ್ದು, ತಾಲ್ಲೂಕು ಕಸಾಪ ಅಧ್ಯಕ್ಷ ಬಿ. ವಾಮದೇವಪ್ಪ ಸಮಸ್ತ ಕನ್ನಡಿಗರಿಗೆ ಶುಭ ಕೋರಿದ್ದಾರೆ. ಮೈಸೂರು ಸಂಸ್ಥಾನದ ಮಹಾರಾಜ ನಾಲ್ವಡಿ ಶ್ರೀ ಕೃಷ್ಣರಾಜ ಒಡೆಯರ್ ಅವರಿಂದ 5.5.1915 ರಲ್ಲಿ ಸ್ಥಾಪಿತವಾಗಿದ್ದ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾದ ಕಸಾಪ ಇಂದು 107ನೇ ಸಂಸ್ಥಾಪನಾ ವರ್ಷಾಚರಣೆಯನ್ನು ಆಚರಿಸಿಕೊಳ್ಳುತ್ತಿದೆ. ಕೊರೊನಾ ಹಿನ್ನೆಲೆಯಲ್ಲಿ ಆಚರಣೆ ಮಾಡುವ ಸುಸ್ಥಿತಿಯಲ್ಲಿಲ್ಲದ ಕಾರಣ ನಮ್ಮ ಮನೆ-ಮನಗಳಲ್ಲಿಯೇ 'ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ' ಧ್ಯೇಯ ವಾಕ್ಯದೊಂದಿಗೆ ಪರಿಷತ್ತಿನ ಉದ್ದೇಶಗಳನ್ನು ಈಡೇರಿಸಲು ಕಂಕಣಬದ್ಧರಾಗೋಣ ಎಂದು ವಾಮದೇವಪ್ಪ ಕರೆ ನೀಡಿದ್ದಾರೆ.

## ಆರ್.ಎಲ್.ಡಿ. ನಾಯಕ ಸಿಂಗ್ ನಿಧನ



ನವದೆಹಲಿ, ಮೇ 6 – ಮಾಜಿ ಕೇಂದ್ರ ಸಚಿವ ಹಾಗೂ ಆರ್.ಎಲ್.ಡಿ. ನಾಯಕ ಅಜಿತ್ ಸಿಂಗ್ ಅವರು ಗುರ್ಗಾಂವ್ ಆಸ್ಪತ್ರೆಯಲ್ಲಿ ಇಂದು ಕೊರೊನಾದಿಂದ ನಿಧನರಾಗಿದ್ದಾರೆ. ಮಾಜಿ ಪ್ರಧಾನ ಮಂತ್ರಿ ಚೌಧರಿ ಚರಣ್ ಸಿಂಗ್ ಅವರ ಪುತ್ರ ಹಾಗೂ ರೈತ ಮುಖಂಡರಾಗಿದ್ದ ಸಿಂಗ್, ಕೊರೊನಾ ಸೋಂಕಿಗೆ ಸಿಲುಕಿದ್ದರು.

## ಜಿಲ್ಲೆಯಲ್ಲಿ 672 ಸೋಂಕಿತರು ಪತ್ತೆ

**(1ನೇ ಪುಟದಿಂದ)** 60 ವರ್ಷದ ಮಹಿಳೆ ಹಾಗೂ ದಾವಣಗೆರೆಯ ಪಿ.ಜೆ. ಬಡಾವಣೆಯ 64 ವರ್ಷದ ಮಹಿಳೆ ಸೋಂಕಿನಿಂದ ಸಾವನ್ನಪ್ಪಿದ್ದಾರೆ. ದಾವಣಗೆರೆ ತಾಲ್ಲೂಕಿನಲ್ಲಿ 356, ಹರಿಹರದಲ್ಲಿ 133, ಜಗಳೂರಿನಲ್ಲಿ 24, ಚನ್ನಗಿರಿಯಲ್ಲಿ 71, ಹೊನ್ನಾಳಿಯಲ್ಲಿ 63 ಹಾಗೂ ಹೊರ ಜಿಲ್ಲೆಗಳ 25 ಜನರು ಸೋಂಕಿತರಾಗಿದ್ದಾರೆ.

**ಬೇಕಾಗಿದ್ದಾರೆ**

**ಮಾನವ ಸಂಪನ್ಮೂಲ ಹೊರಗುತ್ತಿಗೆ ಮೂಲಕ ಕೋವಿಡ್-19 ವೈರಸ್ ಚಿಗಟೇರಿ ಜಿಲ್ಲಾ ಆಸ್ಪತ್ರೆಯೊಳಗೆ 6 ತಿಂಗಳ ಅವಧಿಗೆ 'ಡಿ' ದರ್ಜೆ ಹುದ್ದೆಗೆ ಎಸ್‌ಎಸ್‌ಎಲ್‌ಸಿ ಪಾಸ್ ಅಥವಾ ಫೇಲ್ ಆದವರು ಬೇಕಾಗಿದ್ದಾರೆ.**

ದೈಹಿಕವಾಗಿ ಬಲಿಷ್ಟವಾಗಿರುವ ಸ್ಥಳೀಯ ಅಭ್ಯರ್ಥಿಗಳಿಗೆ ಪ್ರಾಧಾನ್ಯತೆ ನೀಡಲಾಗುವುದು. ಆಕರ್ಷಕ ವೇತನ ನೀಡಲಾಗುವುದು. ಆಸಕ್ತಿವುಳ್ಳವರು ಈ ಕೆಳಗಿನ ಕಚೇರಿಗೆ ದಾಖಲಾತಿಗಳೊಂದಿಗೆ ಭೇಟಿ ಮಾಡತಕ್ಕದ್ದು.
ಈ ಹಿಂದೆ ಆಸ್ಪತ್ರೆಯೊಳಗೆ ಕಾರ್ಯನಿರ್ವಹಿಸಿದ ಸಿಬ್ಬಂದಿಗೆ ಅವಕಾಶವಿರುವುದಿಲ್ಲ.

ಕಚೇರಿ ವಿಳಾಸ :

**ಟಾರ್ಗೆಟ್ ಡಿಟೆಕ್ಟಿವ್ ಅಂಡ್ ಸೆಕ್ಯೂರಿಟಿ ಫೋರ್ಸ್**

# 30/31, ಮುಸ್ಲಿಂ ಹಾಸ್ಟೆಲ್ ಕಾಂಪ್ಲೆಕ್ಸ್, ಚೇತನ ಹೋಟೆಲ್ ರೋಡ್, ದಾವಣಗೆರೆ.
ಮೊ.ಸಂ. 90364 51756, 83104 95506, 96117 70028

# ತಡವಾದ ಆಕ್ಸಿಜನ್ ; ಜಿಲ್ಲಾಸ್ಪತ್ರೆಯಲ್ಲಿ ಆತಂಕ




**(1ನೇ ಪುಟದಿಂದ)** ಗ್ಯಾಸ್ ಏಜೆನ್ಸಿಗಳಿಂದ ತಕ್ಷಣಕ್ಕೆ ಜಂಬೋ ಆಕ್ಸಿಜನ್ ಸಿಲಿಂಡರ್ ತರಿಸಿದ್ದಾರೆ, ಆಕ್ಸಿಜನ್ ತರುವ ವಾಹನಗಳಿಗೆ ಎಸ್ ಪಿ ಹನುಮಂತ ರಾಯ ಹಾಗೂ ದಾವಣಗೆರೆ ಬಡಾವಣೆ ಠಾಣೆ ಹಾಗೂ ಕೆಟಿಜೆ ನಗರ ಪೊಲೀಸ್ ಸಿಬ್ಬಂದಿಗಳ ಜೊತೆ ಆಕ್ಸಿಜನ್ ಸಿಲಿಂಡರ್ ವಾಹನವನ್ನು ಕಳಿಸಿದ್ದಲ್ಲದೆ, ರಸ್ತೆಯಲ್ಲಿ ಬರುವಾಗ ಯಾವುದೇ ತೊಂದರೆ ಆಗದಂತೆ ನೋಡಿಕೊಂಡು ಜಿಲ್ಲಾಸ್ಪತ್ರೆಗೆ ಸಿಲಿಂಡರ್ ತರಿಸಿದ್ದಾರೆ.

ಜಿಲ್ಲಾಸ್ಪತ್ರೆಯ 3 ಮಹಡಿಗಳಲ್ಲಿ ಸುಮಾರು 403 ಜನ ಸೋಂಕಿತರಿದ್ದಾರೆ. ಇದರಲ್ಲಿ 103 ಕೋವಿಡ್ ಸೋಂಕಿತರಲ್ಲದವರು, 300 ಜನ ಕೋವಿಡ್ ಸೋಂಕಿತರಿದ್ದು, ಆಕ್ಸಿಜನ್ ಮೇಲೆ ಅವಲಂಬಿತರಾಗಿದ್ದಾರೆ. ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಇಬ್ಬರ ಸಮಯ ಪ್ರಜ್ಞೆಯಿಂದಾಗಿ ಸೋಂಕಿತರ ಜೀವ ಉಳಿದಿದ್ದು, ದೊಡ್ಡ ದುರಂತ ತಪ್ಪಿದಂತಾಗಿದೆ.

ವಿಜಯನಗರ ಜಿಲ್ಲೆಯ ಸಂಡೂರು ತಾಲ್ಲೂಕಿನ ತೋರಣಗಲ್ಲಿನ ವಿಜಯನಗರ ಘಟಕದಿಂದ ಮಧ್ಯಾಹ್ನ ಸುಮಾರು 2.16ಕ್ಕೆ ಆಕ್ಸಿಜನ್ ಟ್ಯಾಂಕರ್ ದಾವಣಗೆರೆಯ ಜಿಲ್ಲಾಸ್ಪತ್ರೆ ಪ್ರವೇಶಿಸಿ, ನಿರ್ಮಿಸಲಾಗಿದ್ದ ಆಮ್ಲಜನಕ ಟ್ಯಾಂಕರ್ ಗೆ ವರ್ಗಾಯಿಸಲಾಯಿತು. 5 ಗಂಟೆಗಳು ತಡವಾಗಿ ಆಕ್ಸಿಜನ್ ಟ್ಯಾಂಕರ್ ಆಗಮಿಸಿತು. ತಡವಾದ ಹಿನ್ನೆಲೆಯಲ್ಲಿ ಭಯದ ವಾತಾವರಣ ಉಂಟಾಗಿತ್ತು.

ಜಿಲ್ಲಾ ವರಿಷ್ಠಾಧಿಕಾರಿ ಹನುಮಂತರಾಯ ನೇತೃತ್ವದಲ್ಲೇ ಝೀರೋ ಟ್ರಾಫಿಕ್ ನಲ್ಲಿ ಪೊಲೀಸ್ ಬೆಂಗಾವಲಿನಲ್ಲಿ ದಾವಣಗೆರೆಗೆ ಆಕ್ಸಿಜನ್ ಟ್ಯಾಂಕರ್ ತರಿಸಲಾಯಿತು.

ಟ್ಯಾಂಕರ್ ಬಂದು ಇಲ್ಲಿನ ಘಟಕಕ್ಕೆ ವರ್ಗಾಯಿಸುವವರೆಗೂ ಜಿಲ್ಲಾಧಿಕಾರಿಗಳು ಜಿಲ್ಲಾಸ್ಪತ್ರೆಯಲ್ಲೇ ಮೊಕ್ಕಾಂ ಹೂಡಿದ್ದರು. ನಂತರ ನಿರಾಳರಾದರು. ಇಲ್ಲವಾದಲ್ಲಿ ರೋಗಿಗಳಿಗೆ ಅಪಾಯ ಬಂದೊದಗುವ ವಿಷಮ ಪರಿಸ್ಥಿತಿ ಎದುರಾಗಿತ್ತು.

ಒಟ್ಟಿನಲ್ಲಿ ಜಿಲ್ಲೆಯಲ್ಲಿ ಯಾವುದೇ ದುರಂತ ನಡೆಯದಂತೆ ಜಿಲ್ಲೆಯ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ರಕ್ಷಣಾಧಿಕಾರಿ ಇವರ ನೇತೃತ್ವದಲ್ಲಿ ಜಿಲ್ಲಾಡಳಿತ, ಜಿಲ್ಲಾಸ್ಪತ್ರೆಯ ವೈದ್ಯರು, ಅಧಿಕಾರಿಗಳು, ಸಿಬ್ಬಂದಿಗಳ ತಂಡ ಮಾಡಿದ ಶ್ರಮ ನಿಜಕ್ಕೂ ಪ್ರಶಂಸನೀಯ.

## ಆಕ್ಸಿಜನ್ ಟ್ಯಾಂಕರ್‌ಗೆ ಬೆಂಗಾವಲು

**(1ನೇ ಪುಟದಿಂದ)** ಕಾರಣ ಕೆಲ ಕಾಲ ಆತಂಕದ ವಾತಾವರಣ ನಿರ್ಮಾಣವಾಗಿತ್ತು. ಇಂತಹ ಸಂದರ್ಭದಲ್ಲಿ ಪ್ರತಿ ನಿಮಿಷವೂ ನಮಗೆ ಮಹತ್ವದ್ದಾಗಿತ್ತು. ಆದರೂ ಆಕ್ಸಿಜನ್ ಟ್ಯಾಂಕರ್ ಬರುವುದು ತಡವಾದ ಹಿನ್ನೆಲೆಯಲ್ಲಿ ಜಿಲ್ಲೆಯ ಖಾಸಗಿ ಆಸ್ಪತ್ರೆಗಳು ಸೇರಿದಂತೆ ಇತರೆ ಆಮ್ಲಜನಕ ಉತ್ಪಾದನಾ ಘಟಕಗಳಿಂದ 330 ಆಕ್ಸಿಜನ್ ಜಂಬೋ ಸಿಲಿಂಡರ್ ಗಳನ್ನು ತರಿಸಿ ಕೊಂಡು ಯಾವುದೇ ತೊಂದರೆ ಆಗದಂತೆ ಕಾರ್ಯ ಪ್ರವೃತ್ತರಾದೆವು. ಹರಿಹರದ ಸದರನ್ ಆಕ್ಸಿಜನ್ ಘಟಕದಿಂದ ತರಿಸಿ, ಜಿಲ್ಲಾಸ್ಪತ್ರೆಗೆ ಆಕ್ಸಿಜನ್ ಕೊರತೆ ಆಗದಂತೆ ವ್ಯವಸ್ಥೆ ಮಾಡಿದ್ದೇವೆ ಎಂದು ಮಾಹಿತಿ ನೀಡಿದರು.

ಕೊರೊನಾ ಸೋಂಕಿನ ಬಗ್ಗೆ ಸಾರ್ವಜನಿಕರು ಭಯಭೀತರಾಗದೇ, ಬೇಕಾಬಿಟ್ಟಿ ಓಡಾಡದೇ ಕೊರೊನಾ ಸೋಂಕಿನ ಕೊಂಡಿಯನ್ನು ಹೊಡೆದು ಓಡಿಸಬೇಕಿದೆ. ನಿಮಗೆಲ್ಲಾ ಕೈಮುಗಿದು ಬೇಡಿಕೊಳ್ಳುತ್ತೇನೆ ಎಂದು ಅವರು ಮನವಿ ಮಾಡಿದರು.

**ಪತ್ರಿಕಾ ಪ್ರಕಟಣೆಗಾಗಿ**

ಮಾನ್ಯ ಹಿರಿಯ ಶ್ರೇಣಿಯ ಸಿವಿಲ್ ನ್ಯಾಯಾಲಯ, ಹರಿಹರ ಮತ್ತು ಸಂಚಾರಿ ನ್ಯಾಯಾಲಯ ಹೊನ್ನಾಳಿ ಇವರ ನ್ಯಾಯಾಲಯದಲ್ಲಿ, ಅಸಲು ದಾವೆ ನಂ.12 /2021ರ ಪಾಲು ವಿಭಾಗದ ದಾವಾದಲ್ಲಿ ವಾದಿಗಳಾದ 1. ಶ್ರೀಮತಿ. ಜಯಮ್ಮ ತಂದೆ ಲೇಟ್ ಹನುಮಂತಪ್ಪ ಯಾನೆ ಹನುಮಂತಪ್ಪ ಜಿ ಮತ್ತು 2. ಸಾವಿತ್ರಮ್ಮ ತಂದೆ ಲೇಟ್ ಹನುಮಂತಪ್ಪ.ಜಿ ಹಾಗೂ ವಿರುದ್ಧ ಪ್ರತಿವಾದಿಗಳಾದ ಡಿ.ಜಿ.ಷಣ್ಮುಖಪ್ಪ ಯಾನೆ ಷಣ್ಮುಖಪ್ಪ ಪಾಟೀಲ್ ಬಿನ್ ಬಿ.ಜಿ. ಗುರುನಂಜಪ್ಪ, ದತ್ತು ತಂದೆ ಲೇಟ್ ಹನುಮಂತಪ್ಪ ಯಾನೆ ಗೌಡ ಹನುಮಂತಪ್ಪ, ವಯಸ್ಸು ಸುಮಾರು 74 ವರ್ಷ, ವೃತ್ತಿ: ವ್ಯವಸಾಯಗಾರರು, ವಾಸ: ಕುಂದೂರು ಗ್ರಾಮ. ಹೊನ್ನಾಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ, ಹಾಗೂ ಇತರರ ಮಧ್ಯ ಪಾಲು ವಿಭಾಗ ಮತ್ತು ಪ್ರತ್ಯೇಕ ಸ್ವಾಧೀನಾನುಭವದ ಹಾಗೂ ಇತರೆ ಪರಿಹಾರಗಳಿಗಾಗಿ ದಿನಾಂಕ:- 20-01-2021 ರಂದು ಸಲ್ಲಿಸಿದ ಪ್ರಕರಣದ ಸಂಖ್ಯೆ 12/21 ಮತ್ತು ಪ್ರಥಮ ಸುನಾವಣೆಯ ದಿನಾಂಕ:-06-03-2021 ರಂದು ನಿಗದಿ ಮಾಡಿ ನಂತರ 23-04-2021 ರಂದು ಎರಡನೇ ದಿನಾಂಕದಂದು ಸಮನ್ಸ್ ಜಾರಿಯಾಗದ ಪ್ರತಿವಾದಿಗಳಿಗೆ ಮರು ಜಾರಿಗೆ ಹೋಗಿದ್ದು ಸದರಿಯವರು ದಿನಾಂಕ 02-07-2021 ರಂದು ಮಾನ್ಯ ನ್ಯಾಯಾಲಯದಲ್ಲಿ ಹಾಜರಾಗಲು ಗೊತ್ತುಪಡಿಸಿದ್ದು, ನ್ಯಾಯಾಲಯದ ಸಮನ್ಸ್ /ನೋಟಿಸ್ ಜಾರಿಯಾಗದೇ ಇರುವವರು ದಿನಾಂಕ: 02-07-2021 ರಂದು ಖುದ್ದಾಗಿ ಹಾಜರಾಗಿ ತಮ್ಮ ತಕರಾರು ಅಥವಾ ಒಪ್ಪಿಗೆ ತಿಳಿಸಲು ಈ ಪತ್ರಿಕಾ ಪ್ರಕಟಣೆಯ ಮೂಲಕ ತಿಳಿಯ ಪಡಿಸಿದ್ದು ಹಾಗೂ ಈ ದಾವಾದಲ್ಲಿರುವ ಸ್ವತ್ತುಗಳಲ್ಲಿ ಸಾರ್ವಜನಿಕ ಭಿತ್ತಿ ಫಲಕಗಳನ್ನು ಸ್ಥಾಪಿಸುತ್ತಿದ್ದು ಕುಂದೂರು ಗ್ರಾಮದ ಸರ್ವೆ ನಂ. 142 ರ, ತರಿ ಜಮೀನು 3 ಎಕರೆ 10 ಗುಂಟೆ ಎಂದು ನಮೂದಾಗಿರುತ್ತದೆ. ಅದೇ ರೀತಿ ( 1ನೇ ಪ್ರತಿವಾದಿ ) ಡಿ.ಜಿ. ಷಣ್ಮುಖ ಪಾಟೀಲ್ ಬಿನ್ ದತ್ತು ತಂದೆ ಗೌಡ ಹನುಮಂತಪ್ಪ ಎಂದು ಹಾಗೂ ಸರ್ವೆ ನಂ. 134 ರಲ್ಲಿ 28 ಗುಂಟೆ, ಸರ್ವೆ ನಂ. 143 ರಲ್ಲಿ 4 ಎಕರೆ, ಸರ್ವೆ ನಂ. 160 ರಲ್ಲಿ 3 ಎಕರೆ, ಸರ್ವೆ ನಂ. 39 ರಲ್ಲಿ 14 ಎಕರೆ ಸ್ವತ್ತುಗಳು ಮತ್ತು ಇತರೆ ಸ್ವತ್ತುಗಳಿಗೆ, ಸಿವಿಲ್ ವ್ಯಾಜ್ಯ ಇರುವುದಾಗಿ ಪ್ರಕಟಿಸಿದ್ದು. ಈ ಪ್ರಕಟಣೆಯ ನಂತರ, ಸದರಿ ಸ್ವತ್ತುಗಳು ಪರಭಾರೆಯಾದರೆ ಅಥವಾ ಈ ಮೊದಲು ಪರಭಾರೆಯಾಗಿದ್ದರೆ, ಒಟ್ಟು ಕುಟುಂಬದ ಪಿತ್ರಾರ್ಜಿತ ಸ್ವತ್ತುಗಳೆಂದು ತಿಳಿಸುವ ತಿಳುವಳಿಕೆಗಾಗಿ, ಈ ಪ್ರಕಟಣೆ.

ಪ್ರಕಟಿಸಿದವರು : 1. ಶ್ರೀಮತಿ ಜಯಮ್ಮ ತಂದೆ ಲೇ॥ ಹನುಮಂತಪ್ಪ ಯಾನೆ ಹನುಮಂತಪ್ಪ ಜಿ.
2. ಸಾವಿತ್ರಮ್ಮ ತಂದೆ ಲೇ॥ ಹನುಮಂತಪ್ಪ ಜಿ.

**ಕೆ.ಆರ್. ಮಂಜುನಾಥ (ಮಾಸಡಿ), B.Com., LL.B.,**
ವಕೀಲರು, ರೋಲ್ ನಂ. KAR 2771/2000, ಗುಳ್ಳಪ್ಪ ಕಾಂಪ್ಲೆಕ್ಸ್, ದುರ್ಗಿಗುಡಿ, 11ನೇ ಕ್ರಾಸ್, ಹೊನ್ನಾಳಿ-577 217, ದಾವಣಗೆರೆ ಜಿಲ್ಲೆ. ಮೊ. : 9880335501, 9483818101

**ದಾವಣಗೆರೆ ಎಣ್ಣೆ ಸಂಕೀರ್ಣ**

ಎಪಿಎಂಸಿ ರಸ್ತೆ, ದಾವಣಗೆರೆ ಫೋ. : 08192 231332
ಕೆ.ಓ.ಎಫ್: ಡಿ.ಓ.ಸಿ. : 2021-22/40 ದಿನಾಂಕ : 06.05.21

**ಪ್ರಕಟಣೆ**

ದಾವಣಗೆರೆಯಲ್ಲಿರುವ, ಕೆ.ಓ.ಎಫ್. ಸಂಸ್ಥೆಯ ದಾವಣಗೆರೆ ಎಣ್ಣೆ ಸಂಕೀರ್ಣ ಶಾಖೆಗೆ ರಾಜ್ಯದ ವಿವಿಧ ಎಪಿಎಂಸಿಗಳಿಂದ ಶೇಂಗಾಕಾಯಿ, ಸೂರ್ಯಕಾಂತಿ ಹಾಗೂ ಇತರೆ ಕೃಷಿ ಉತ್ಪನ್ನಗಳನ್ನು ಸಾಗಾಣಿಕೆ ಮಾಡಲು ಎಣ್ಣೆ ಸಂಕೀರ್ಣದಿಂದ ರಾಜ್ಯದಲ್ಲಿರುವ ಕೃಷಿ ಇಲಾಖೆಯ ರೈತ ಸಂಪರ್ಕ ಕೇಂದ್ರಗಳಿಗೆ, ಹೊರ ರಾಜ್ಯಗಳಿಗೆ, ಹೊರ ರಾಜ್ಯಗಳಿಂದ ರಾಜ್ಯಕ್ಕೆ ಶೇಂಗಾ ಬೀಜ/ಕಾಯಿ ದಾಸ್ತಾನನ್ನು ಹಾಗೂ ಪ್ಯಾಕ್ ಮಾಡಿದ ಎಣ್ಣೆಯನ್ನು ಶಾಖೆಯಿಂದ ರಾಜ್ಯದ ಇತರೆ ಭಾಗಗಳಿಗೆ ಸಾಗಾಣಿಕೆ ಮಾಡಲು 2021-22 ಹಾಗೂ 2022-23ನೇ ಸಾಲಿಗೆ ದ್ವೈವಾರ್ಷಿಕ ಗುತ್ತಿಗೆಗಾಗಿ, ರಸ್ತೆ ಸಾಗಾಣಿಕೆ ಸಾರಿಗೆದಾರರಿಂದ ಮೊಹರಾದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ನಲ್ಲಿ ಭಾಗವಹಿಸುವ ಸಾರಿಗೆದಾರರು ರೂ. 590/- (ಸೇವಾ ಶುಲ್ಕ ಸೇರಿ) ಗಳನ್ನು ನಗದಾಗಿ ಅಥವಾ ಡಿ.ಡಿ. ಮೂಲಕ "ಕರ್ನಾಟಕ ಸಹಕಾರಿ ಎಣ್ಣೆ ಬೀಜ ಬೆಳೆಗಾರರ ಮಹಾಮಂಡಳಿ ನಿಯಮಿತ" ದಾವಣಗೆರೆಗೆ ಸಂದಾಯವಾಗುವಂತೆ ಪಡೆದು, ಡಿ.ಡಿ.ಯನ್ನು ಕಛೇರಿಯ ವೇಳೆಯಲ್ಲಿ ಸಲ್ಲಿಸಿ, ಅರ್ಜಿಗಳನ್ನು ದಾವಣಗೆರೆ ಕೇಂದ್ರದಿಂದ ಪಡೆಯಬಹುದು.

ಮೊಹರಾದ ಟೆಂಡರ್‌ಗಳನ್ನು ದಿ. : 13.05.2021ರ ಗುರುವಾರದಂದು ಮಧ್ಯಾಹ್ನ 1.30 ಗಂಟೆಯೊಳಗೆ ಸಲ್ಲಿಸತಕ್ಕದ್ದು ಮತ್ತು ಅದೇ ದಿನ ಮಧ್ಯಾಹ್ನ 3.00 ಗಂಟೆಗೆ ಹಾಜರಿರುವ ಟೆಂಡರ್‌ದಾರರ ಸಮ್ಮುಖದಲ್ಲಿ ಟೆಂಡರ್‌ಗಳನ್ನು ತೆರೆಯಲಾಗುವುದು. ಟೆಂಡರ್ ಪ್ರಕ್ರಿಯೆಯನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಮಹಾಮಂಡಳಿ ಹೊಂದಿರುತ್ತದೆ.

ಸಹಿ/- ಜೆ. ರಮೇಶ್, ವ್ಯವಸ್ಥಾಪಕರು
ಕೆ.ಓ.ಎಫ್., ದಾವಣಗೆರೆ. ಫೋ. : 95918 12040






## ರೂಪಾಂತರಗೊಳ್ಳಬೇಕಿದೆ...!!!!

ಈ ರೂಪಾಂತರಿ ಕೊರೊನಾ ಕಾಟ ಬಹಳ ಜೋರಾಗ್ತ ಇದೆ. ಏನು ಮಾಡಬೇಕು ಗೊತ್ತಾಗ್ತಾ ಇಲ್ಲ.

**ತಮ್ಮಾ ನಾವೂ ರೂಪಾಂತರಗೊಳ್ಳಬೇಕಿದೆ.**

ಅಂದರೇ!?

**ಗುಂಪಾಗಿ ಸೇರಿ ಹರಟೆ ಹೊಡಿತಿದ್ವಿ, ಪಾರ್ಟಿ ಮಾಡ್ತಾ ಇದ್ವಿ, ಶಾಪಿಂಗ್ ಮಾಡ್ತಾ ಇದ್ವಿ ಅದನ್ನು ಬಿಡಬೇಕು. ಸುಮ್ಮ ಸುಮ್ಮನೇ ಮನೆಯಿಂದ ಹೊರಗೆ ಇಣಕುಬಾರ್ದು.. ಸೋಪು ಹಚ್ಚಿ ಕೈ ತೊಳೆದುಕೊಂಡೇ ತಿನ್ನೋ ವಸ್ತುನಾ ಮುಟ್ಟಬೇಕು.**

ಹೇ ಅದನ್ನು ಹೋದ ವರ್ಷಾನೇ ಮಾಡಿದ್ವಲಾ!

**ಲೇ ಆಗ ಹೆದರಿಕೊಂಡು ಒಂದೆರಡು ತಿಂಗಳು ಹಂಗೆ ಮಾಡಿದ್ವಿ. ಈಗ ಅದನ್ನು ರೂಢಿ ಮಾಡಿಕೊಳ್ಳಬೇಕು. ದಿನಾ ಮಾಡೋದನ್ನ ಅಳವಡಿಸಿಕೊಳ್ಳಬೇಕು. ಅದಕ್ಕೇ ರೂಪಾಂತರ ಅನ್ನೋದು.**

ಹೌದೂ, ಒಂದು ರೀತಿ ಲಾಕ್ ಡೌನ್ ಆಗಿ ಒಂದು ವಾರದ ಮೇಲೆ ಆಯ್ತು. ಇನ್ನೂ ಸಾಮೂಹಿಕವಾಗಿ ಗಂಟೆ ಬಾರಿಸೋದು, ದೀಪ ಹಚ್ಚೋದು ನಡೆದೇ ಇಲ್ವಲ್ಲಾ?

**ಅದೂ ರೂಪಾತರಗೊಂಡಿದೆ!**

ಹೆಂಗೆ!?

**ಗಂಟೆ, ಜಾಗಟೆ ಶಬ್ದದ ಬದಲು ಸಾಮೂಹಿಕವಾಗಿ ಸ್ಮಶಾನ ಸೇರ್ತಾ ಇರೋರ ಸಂಬಂಧಿಕರು ಲಬ ಲಬ ಹೊಯ್ಕಳ್ಳೋ ಶಬ್ದ ಕೇಳ್ತಾ ಇದಾರೆ! ದೀಪದ ಬದಲು ಸಾಮೂಹಿಕವಾಗಿ ಹೆಣಗಳ ಜ್ವಾಲೆ ಉರಿತಾ ಇದೆ!!**

ಹೌದು! ಟಿ.ವಿಗಳಲ್ಲಿ ನೋಡಿದೆ, ಭಯಾನಕವಾಗಿದೆ.

**ನನಗೆ ಗೊತ್ತಿರೋ ಸಂಘ-ಸಂಸ್ಥೆಗಳವರಿಗೆ ಒಂದು ಮನವಿ ಮಾಡಿದೀನಿ.**

ಏನಂತ?

**ಸದ್ಯ ಸಾಮೂಹಿಕ ವಿವಾಹಗಳನ್ನು ಏರ್ಪಾಡು ಮಾಡಬೇಡಿ ಅಂತ.**

ಮತ್ತೇನು ಏರ್ಪಾಡು ಮಾಡಬೇಕು?

**ಸಾಮೂಹಿಕ ಶವ ಸಂಸ್ಕಾರ!!!**

## ಗ್ರಾಮೀಣ ಸೇವೆಯ ವೈದ್ಯರಿಗೆ 62 ಸಾವಿರ ರೂ.

ಬೆಂಗಳೂರು, ಮೇ 6-ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕಡ್ಡಾಯ ಗ್ರಾಮೀಣ ಸೇವೆ ಸಲ್ಲಿಸುತ್ತಿರುವ ಎಂಬಿಬಿಎಸ್ ಪದವೀಧರರಿಗೆ 62,666 ರೂ.ಗಳ ಮಾಸಿಕ ಸಂಭಾವನೆ ನಿಗದಿ ಪಡಿಸಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಆದೇಶ ಹೊರಡಿಸಿದೆ. ಸ್ನಾತಕೋತ್ತರ ಪದವಿ ಪಡೆದವರಿಗೆ 70 ಸಾವಿರ ರೂ.ಗಳ ವೇತನ ನಿಗದಿ ಪಡಿಸಲಾಗಿದೆ.

# ಬೀದಿ ಬದಿ ವ್ಯಾಪಾರಸ್ಥರಿಗೆ ಪರ್ಯಾಯ ವ್ಯವಸ್ಥೆಗೆ ಕ್ರಮ

### ಹಣ್ಣು, ತರಕಾರಿ ವ್ಯಾಪಾರಿಗಳಿಗೆ ತಳ್ಳು ಗಾಡಿ ವಿತರಣಾ ಸಮಾರಂಭದಲ್ಲಿ ತಹಶೀಲ್ದಾರ್ ಬಿ.ಎನ್. ಗಿರೀಶ್

ದಾವಣಗೆರೆ, ಮೇ 6- ಲಾಕ್‌ಡೌನ್‌ನಂತಹ ಪರಿಸ್ಥಿತಿಯಲ್ಲಿ ಪುಟ್‌ಪಾತ್ ಸೇರಿದಂತೆ ಬೀದಿ ಬದಿಯಲ್ಲಿ ಕುಳಿತು ತರಕಾರಿ, ಹಣ್ಣು-ಹಂಪಲು ವ್ಯಾಪಾರ ಮಾಡುವ ವ್ಯಾಪಾರಸ್ಥರಿಗೆ ವ್ಯಾಪಾರ ಮಾಡದಂತೆ ತಾಲ್ಲೂಕು ಆಡಳಿತ ತಾಕೀತು ಮಾಡಿತ್ತು.

ಆದರೆ ಇವರ ಸ್ಥಿತಿಯನ್ನು ಮನಗಂಡು ಅವರ ಜೀವನ ನಿರ್ವಹಣೆಗೆ ಪರ್ಯಾಯ ವ್ಯವಸ್ಥೆ ಕಲ್ಪಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗಿದೆ ಎಂದು ತಹಶೀಲ್ದಾರ್ ಬಿ.ಎನ್.ಗಿರೀಶ್ ಹೇಳಿದರು.

ನಗರದ ತ್ರಿಶೂಲ್ ಕಲಾಭವನದಲ್ಲಿ ಜೈನ್ ಫ್ರೆಂಡ್ಸ್ ಗ್ರೂಪ್ ವತಿಯಿಂದ ಆಯೋಜಿಸಲಾಗಿದ್ದ ಹಣ್ಣು ಮತ್ತು ತರಕಾರಿ ವ್ಯಾಪಾರಿಗಳಿಗೆ ತಳ್ಳು ಗಾಡಿ ವಿತರಣಾ ಸಮಾರಂಭದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಲಾಕ್‌ಡೌನ್ ಹಿನ್ನೆಲೆಯಲ್ಲಿ ಬೀದಿ ಬದಿ ವ್ಯಾಪಾರಿಗಳ ಮೇಲೆ ಕೈಗೊಂಡ ಕ್ರಮ ಸಮಂಜಸ ಎಂದು ಕಾಣಲಿಲ್ಲ. ಕಾರಣ ಈ ನಿಟ್ಟಿನಲ್ಲಿ ನಾವುಗಳು ಬೀದಿ ಬದಿ ವ್ಯಾಪಾರಿಗಳ ಬಗ್ಗೆ ಚಿಂತನೆ ನಡೆಸಿ ದಾನಿಗಳನ್ನು ಹುಡುಕುಲಾಯಿತು.

ಅದರಂತೆ ನಮ್ಮ ಯೋಚನೆಗೆ ಮೊದಲು ಬಂದಿದ್ದೇ ಜೈನ್ ಸಮಾಜ. ಅದರಂತೆ ಜೈನ್ ಫ್ರೆಂಡ್ಸ್ ಗ್ರೂಪ್‌ನಿಂದ 15 ತಳ್ಳುಗಾಡಿಗಳನ್ನು ಅತಿ ಕಡುಬಡವರಾದ ಬೀದಿ ಬದಿ ವ್ಯಾಪಾರಿಗಳಿಗೆ 10 ರಿಂದ 12 ಸಾವಿರ ರೂ ವೆಚ್ಚದಲ್ಲಿ ತಯಾರಿಸಿ ಎಲ್ಲಾ ವರ್ಗದ ಅಸಂಘಟಿತ ವ್ಯಾಪಾರಿಗಳಿಗೆ ನೀಡಲಾಗಿದೆ ಎಂದರು.



2ನೇ ಅಲೆಯ ಸಂದರ್ಭದಲ್ಲಿ ಪುಟ್‌ಪಾತ್ ವ್ಯಾಪಾರಿಗಳಿಗೆ ಕೊರೊನಾ ಬಗ್ಗೆ ತಿಳುವಳಿಕೆ ನೀಡಿ, ಮಾಸ್ಕ್ ಧರಿಸುವಂತೆ, ಸಾಮಾಜಿಕ ಅಂತರ ಕಾಯ್ದುಕೊಳ್ಳುವಂತೆ ಅಲ್ಲದೇ ಸೋಂಕು ನಿವಾರಕ ದ್ರಾವಣ ಬಳಸುವಂತೆ ಸೂಚನೆ ನೀಡಲಾಗಿತ್ತು. ಅಲ್ಲದೇ ಸರ್ಕಾರದ ನಿರ್ದೇಶನದಂತೆ ಬೀದಿ ಬದಿ ವ್ಯಾಪಾರಿಗಳನ್ನು ತೆರವುಗೊಳಿಸಬೇಕಾದ ಸಂದರ್ಭ ಬಂದೊದಗಿತು. ಇಂತಹ ವೇಳೆ ನಮಗೂ ವ್ಯಥೆ ಆಯಿತು. ಈ ರೀತಿ ಆದರೆ ಅವರ ಜೀವನ ನಿರ್ವಹಣೆ ಹೇಗೆ ಸಾಧ್ಯ ಎಂದು ಚಿಂತಿಸಿ ಜೈನ್ ಸಮಾಜದ ವಿವೇಕ್ ಸಂಘವಿ ಅವರನ್ನು ಸಂಪರ್ಕಿಸಿ ಕೋರಿಕೊಂಡಾಗ ಅವರಿಗೆ ತಳ್ಳುಗಾಡಿ ವ್ಯವಸ್ಥೆ ಮಾಡಲಾಗಿದೆ ಎಂದು ಹೇಳಿದರು.

ವಿಕಾಸ್ ಜೈನ್ ಮಾತನಾಡಿ, ಸಮಾಜದ ಎಲ್ಲಾ ಆರ್ಥಿಕತೆ ಇದ್ದವರ ಬಗ್ಗೆ ಚರ್ಚಿಸಿ, ಬಡವರಿಗೆ ಸಹಾಯ ಮಾಡುವ ನಿಟ್ಟಿನಲ್ಲಿ ಮುಂದಾದೆವು. ಅದರಂತೆ ತಹಶೀಲ್ದಾರ್ ಬಿ.ಎನ್.ಗಿರೀಶ್ ಜೊತೆಗೂಡಿ ಬಡವರಿಗೆ ಸಹಾಯ ಹಸ್ತ ಚಾಚುತ್ತಿದ್ದೇವೆ ಎಂದು ಹೇಳಿದರು.

ಈ ವೇಳೆ ರಮಣಲಾಲ್ ಸಂಘವಿ, ಕೆಟಿಜೆ ನಗರ ಪೊಲೀಸ್ ಠಾಣೆಯ ಪಿಎಸ್ಐ ವೀರೇಶ್, ತ್ರಿಶೂಲ್ ಕಲಾಭವನದ ಮಾಲೀಕ ಪ್ರಕಾಶ್ ಕಂದನಕೋವಿ, ಕಾರ್ಮಿಕ ಮುಖಂಡ ಆವರಗೆರೆ ಹೆಚ್.ಜಿ.ಉಮೇಶ್, ಕೇವಲಚಂದ್‌ಜೀ, ಧನಪಾಲ್, ಜಸವಂತ್, ಪಿ.ಬಿ. ಪ್ರಕಾಶ್, ವಿಕಾಸ್ ಸಂಘವಿ, ಲಕ್ಷ್ಮಣ್ ಕೊಠಾರಿ, ಜೀತು ವೇಲಚಂದ್ ನಾಹಟಾ, ವಿಶಾಲ್ ಸಂಘವಿ, ರಮೇಶ್ ನಾಹಟಾ, ವಿನೀತ ಗಣೇಶ್‌ಮಲ್, ಧನ್‌ಪತ್, ಶಿವಕುಮಾರ್, ಭರತ್, ಚಂಪಾಲಾಲ್ ನಾಕೋಡ, ಅಮ್ಜದ್ ಪಾಷಾ, ನಿರಂಜನ್ ಜಾಲಿ, ರುಷಲ ಸಂಘವಿ, ರಿಷಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಇದೇ ವೇಳೆ ಸಾಂಕೇತಿಕವಾಗಿ ತಳ್ಳುಗಾಡಿ ವ್ಯಾಪಾರಸ್ಥರಾದ ಗೋಶಾಲೆ ಶಿವಮ್ಮ, ನಿರ್ಮಲಮ್ಮ, ರತ್ನಿಬಾಯಿ, ಸೀನಪ್ಪ ಅವರಿಗೆ ತಳ್ಳುಗಾಡಿಗಳನ್ನು ಹಸ್ತಾಂತರಿಸಲಾಯಿತು.

# 12ರಿಂದ ಆನ್‌ಲೈನ್‌ನಲ್ಲಿ ಪದವಿ ತರಗತಿ

## ದಾವಣಗೆರೆ ವಿವಿ ಕಾಲೇಜು ಪ್ರಾಚಾರ್ಯರ ಸಭೆಯಲ್ಲಿ ನಿರ್ಧಾರ



ದಾವಣಗೆರೆ, ಮೇ 6- ಕೋವಿಡ್-19ರ ಸಂದರ್ಭದಲ್ಲಿ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಹಿನ್ನಡೆ ಆಗದಂತೆ ತಡೆಯುವ ಉದ್ದೇಶದಿಂದ ದಾವಣಗೆರೆ ವಿಶ್ವವಿದ್ಯಾನಿಲಯ ತನ್ನ ವ್ಯಾಪ್ತಿಯ ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳ ಎಲ್ಲ ಸ್ನಾತಕ ಪದವಿ ತರಗತಿಗಳಿಗೆ ಮೇ 12ರಿಂದ ಆನ್‌ಲೈನ್ ತರಗತಿ ಆರಂಭಿಸಲು ನಿರ್ಧರಿಸಿದೆ.

ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ ಅವರ ಅಧ್ಯಕ್ಷತೆಯಲ್ಲಿ ಗುರುವಾರ ನಡೆದ ಪದವಿ ಕಾಲೇಜು ಪ್ರಾಚಾರ್ಯರ ಜೊತೆಗಿನ ಆನ್‌ಲೈನ್ ಸಭೆಯ ನಂತರ ಈ ನಿರ್ಧಾರ ಮಾಡಲಾಯಿತು.

ಈಗಾಗಲೇ ಪರೀಕ್ಷೆ ಮುಗಿದು 15 ದಿನಗಳಾಗಿದ್ದು, ವಿಶ್ರಾಂತಿ ನೀಡಿದಂತಾಗಿದೆ. ಇನ್ನೂ ಒಂದು ವಾರ ಮಾಹಿತಿ ನೀಡಿ ಮೇ 12ರಿಂದ ಆನ್‌ಲೈನ್ ತರಗತಿ ಆರಂಭಿಸಲಾಗುತ್ತದೆ. ಅದಕ್ಕೂ ಮುನ್ನ ಪ್ರಾಧ್ಯಾಪಕರೂ ಸಿದ್ಧತೆ ಮಾಡಿಕೊಳ್ಳಲು ಅವಕಾಶ ನೀಡಿದಂತಾಗುತ್ತದೆ ಎಂದು ತಿಳಿಸಿದರು.

ಪ್ರಸ್ತುತ ಪದವಿ ಪರೀಕ್ಷೆ ಮುಗಿದಿದ್ದರಿಂದ ವಿದ್ಯಾರ್ಥಿಗಳನ್ನು ಶೈಕ್ಷಣಿಕವಾಗಿ ತೊಡಗಿಸಿಕೊಳ್ಳುವುದು ಮುಖ್ಯವಾಗಿದೆ. ಅವರಿಗೆ ಆನ್‌ಲೈನ್ ಮೂಲಕ ಮುಂದಿನ ಸೆಮಿಸ್ಟರ್ ಅಂದರೆ ಎರಡು, ನಾಲ್ಕು ಮತ್ತು ಆರನೇ ಸೆಮಿಸ್ಟರ್ ಪಠ್ಯ ಪಾಠಗಳನ್ನು ಆರಂಭಿಸುವುದು ಮುಖ್ಯವಾಗಿದೆ. ಇದರಿಂದ ಅವರ ಶೈಕ್ಷಣಿಕ ಭವಿಷ್ಯ ಕ್ಕೂ ತೊಂದರೆ ಆಗುವುದಿಲ್ಲ. ವಿದ್ಯಾ ರ್ಥಿಗಳನ್ನು ಶೈಕ್ಷಣಿಕ ವಾತಾವರ ಣದಲ್ಲಿ ತೊಡಗಿಸಿಕೊಂಡರೆ ಅನಗತ್ಯವಾಗಿ ಆತಂಕಕ್ಕೆ ಅವಕಾಶ ಇರುವುದಿಲ್ಲ. ಅಲ್ಲದೆ ವಿದ್ಯಾರ್ಥಿಗಳ ನಿರಂತರ ಮೇಲ್ವಿಚಾರಣೆಗೂ ಸಹಕಾರ ಆಗಲಿದೆ ಎಂದು ನುಡಿದರು.

ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಆನ್‌ಲೈನ್‌ನಲ್ಲಿ ಪಾಠ ಕೇಳುವುದಕ್ಕೆ ತೊಂದರೆ ಯಾದರೆ ಪಠ್ಯಪೂರಕ ಮಾಹಿತಿಯನ್ನು ಲಭ್ಯವಿರುವ ಮಾಧ್ಯಮಗಳ ಮೂಲಕ ವಿದ್ಯಾರ್ಥಿಗಳಿಗೆ ತಲುಪಿಸ ಬೇಕು. ಅದಕ್ಕಾಗಿ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಅನು ಕೂಲವಾಗುವ ರೀತಿಯಲ್ಲಿ ವಾಟ್ಸ್‌ಆಪ್, ಇನ್‌ಸ್ಟಾ ಗ್ರಾಂ, ಗೂಗಲ್ ಕ್ಲಾಸ್ ರೂಂ ಅಥವಾ ಇನ್ನಿತರೆ ಮಾಧ್ಯಮಗಳಲ್ಲಿ ಗುಂಪು ರಚಿಸಿ ಪೂರಕ ಮಾಹಿತಿ ಒದಗಿಸಬೇಕು. ಯಾವುದೇ ವಿದ್ಯಾರ್ಥಿಯೂ ಶೈಕ್ಷಣಿಕವಾಗಿ ಹಿನ್ನಡೆ ಅನುಭವಿಸದಂತೆ ಗಮನ ನೀಡಬೇಕು ಎಂದು ಸೂಚಿಸಿದರು.

ಕಳೆದ ವರ್ಷದ ಅನುಭವ ಮತ್ತು ಸಮಸ್ಯೆಗಳನ್ನು ಗಮನಿಸಿ ಪರಿಹಾರ ಮಾರ್ಗ ಕಂಡುಕೊಳ್ಳಲು ಗಮನ ನೀಡಬೇಕು. ವಿದ್ಯಾರ್ಥಿಗಳ ಜೊತೆ ನಿರಂತರ ಸಂಪರ್ಕ ದಲ್ಲಿದ್ದು, ಅವರ ಚಲನವಲನ, ಆರೋಗ್ಯ ಹಾಗೂ ಶೈಕ್ಷಣಿಕ ಪ್ರಗತಿಯ ಸಂಪೂರ್ಣ ಮಾಹಿತಿ ಸಂಗ್ರಹಿಸಿ, ಪ್ರತಿ ವಾರಕ್ಕೊಮ್ಮೆ ಸಲ್ಲಿಸಲು ಎಲ್ಲ ಪ್ರಾಚಾರ್ಯರಿಗೂ ಸೂಚಿಸಲಾಗಿದೆ ಎಂದು ವಿವರಿಸಿದರು.

ಈಗಾಗಲೇ ವಿಶ್ವವಿದ್ಯಾನಿಲಯದ ಎಲ್ಲ ಪದವಿ ತರಗತಿಗಳ ಪರೀಕ್ಷೆಗಳು ಪೂರ್ಣಗೊಂಡಿವೆ. ಇದರಲ್ಲಿ ಶೇ. 90ರಷ್ಟು ವಿಷಯಗಳ ಮೌಲ್ಯಮಾಪನವೂ ನಡೆದಿದೆ. ಸ್ನಾತಕೋತ್ತರ ಪದವಿ ಮತ್ತು ಬಿ.ಎಡ್ ಪದವಿ ಪರೀಕ್ಷೆಗಳು ಬಾಕಿ ಇವೆ. ಅವುಗಳನ್ನು ನಡೆಸುವ ಸಂದ ರ್ಭದಲ್ಲಿ ಕೋವಿಡ್-19 ಹೆಚ್ಚಾಗಿ ಪರೀಕ್ಷೆ ಮುಂದೂಡ ಲಾಗಿದೆ ಎಂದು ಕುಲಪತಿ ಪ್ರೊ. ಹಲಸೆ ತಿಳಿಸಿದರು.

ಸಭೆಯಲ್ಲಿ ಕುಲಸಚಿವೆ ಪ್ರೊ. ಗಾಯತ್ರಿ ದೇವರಾಜ್, ಸಿಂಡಿಕೇಟ್ ಸದಸ್ಯರು, ಅಕಾಡೆಮಿಕ್ ಕೌನ್ಸಿಲ್ ಸದಸ್ಯರು, ವಿವಿಧ ಕಾಲೇಜುಗಳ ಪ್ರಾಚಾರ್ಯರು ಭಾಗವಹಿಸಿದ್ದರು.

## ಸೋಂಕಿತರಿಗೆ ಅನ್ನ ದಾಸೋಹ ತರಳಬಾಳು ಜಗದ್ಗುರು ಶ್ಲ್ಯಾಘನೆ



ದಾವಣಗೆರೆ,ಮೇ 6- ಕೊರೊನಾ ಸೋಂಕಿತರು, ಸರ್ಕಾರಿ ಆಸ್ಪತ್ರೆಯ ರೋಗಿಗಳು, ಬಡವರಿಗೆ ಪ್ರತಿದಿನ ಅನ್ನ ದಾಸೋಹ ನಡೆಸುತ್ತಿರುವ ತರಳಬಾಳು ಸೇವಾ ಸಮಿತಿ ಮತ್ತು ಶಿವಸೈನ್ಯ ಯುವಕರ ಸಂಘದ ಸೇವೆಯನ್ನು ತರಳಬಾಳು ಜಗದ್ಗುರು ಡಾ. ಶ್ರೀ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ಮುಕ್ತ ಕಂಠದಿಂದ ಪ್ರಶಂಸಿಸಿದ್ದಾರೆ.

ಜನತಾ ಕರ್ಫ್ಯೂ ಸಂದರ್ಭದಲ್ಲಿ ಸಂಕಷ್ಟದಲ್ಲಿರುವ ರೋಗಿಗಳಿಗೆ ಪ್ರತಿದಿನ ಬೆಳಿಗ್ಗೆ ಉಪಹಾರ, ಮಧ್ಯಾಹ್ನ ಮತ್ತು ರಾತ್ರಿ ಊಟವನ್ನು ದಾನಿಗಳ ಸಹಕಾರ ಪಡೆದು ಅನ್ನ ದಾಸೋಹ ಮಾಡುತ್ತಿರುವ ತರಳಬಾಳು ಸೇವಾ ಸಮಿತಿ ಮತ್ತು ಶಿವಸೈನ್ಯ ಯುವಕರ ಸಂಘದ ಕಾರ್ಯಕರ್ತರ ಸೇವೆ ಶ್ಲಾಘನೀಯವಾದದ್ದು ಎಂದು ಜಗದ್ಗುರುಗಳು ಹೇಳಿದ್ದಾರೆ. ಕಾರ್ಯಕರ್ತರ ಸೇವೆಯನ್ನು ತಿಳಿದು, ಸಂಘದ ಗೌರವಾಧ್ಯಕ್ಷ ಶಶಿಧರ್ ಹೆಮ್ಮನಬೇತೂರು ಅವರನ್ನು ದೂರವಾಣಿ ಮೂಲಕ ಸಂಪರ್ಕಿಸಿದ ಜಗದ್ಗುರುಗಳು, ಈ ಪುಣ್ಯದ ಕಾರ್ಯಕ್ಕೆ ತಮ್ಮ ಮಠದಿಂದಲೂ ಅಗತ್ಯ ಸಹಕಾರ ನೀಡುವುದಾಗಿ ತಿಳಿಸಿದ್ದಾರೆ.

## ಕೊರೊನಾ ಪ್ಯಾಕೇಜ್ ಹೆಚ್ಚಳ

ಬೆಂಗಳೂರು, ಮೇ 6 – ಕೊರೊನಾ ರೋಗಿಗಳ ಚಿಕಿತ್ಸೆಗಾಗಿ ಖಾಸಗಿ ಆರೋಗ್ಯ ಸಂಸ್ಥೆಗಳಿಗೆ ನೀಡುತ್ತಿರುವ ಪ್ಯಾಕೇಜ್ ದರವನ್ನು ರಾಜ್ಯ ಸರ್ಕಾರ ಹೆಚ್ಚಿಸಿ ಆದೇಶ ಹೊರಡಿಸಿದೆ. ಅದರ ಅನ್ವಯ, ಜನರಲ್ ವಾರ್ಡ್‌ನಲ್ಲಿ ಒಂದು ದಿನದ ಚಿಕಿತ್ಸೆಗೆ 5,200 ರೂ.ಗಳ ದರ ನಿಗದಿ ಪಡಿಸಲಾಗಿದೆ.

ಹೆಚ್.ಡಿ.ಯು. ದರ 8 ಸಾವಿರ ರೂ., ಐಸೋಲೇಷನ್ ಐಸಿಯು ವೆಂಟಿಲೇಟರ್ ರಹಿತ 9,750 ರೂ. ಹಾಗೂ ಐಸೋಲೇಷನ್ ಐಸಿಯು ವೆಂಟಿಲೇಟರ್ ಸಹಿತ 11,500 ರೂ.ಗಳೆಂದು ನಿಗದಿ ಪಡಿಸಲಾಗಿದೆ.

ಈ ದರಗಳು ಪಿಪಿಇ ಹಾಗೂ ಪರಿಕರಗಳ ದರವನ್ನೂ ಒಳಗೊಂಡಿದೆ.

## ನಗರಕ್ಕೆ ಇಂದು ಜಿಲ್ಲಾ ಸಚಿವ ಭೈರತಿ



ಇಂದು ಮತ್ತು ನಾಳೆ ನಗರದಲ್ಲಿ ಏರ್ಪಾಡಾಗಿರುವ ವಿವಿಧ ಸಭೆಗಳಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಬಸವರಾಜ್ ಭಾಗವಹಿಸುವರು.

ಇಂದು ಬೆಳಿಗ್ಗೆ 10 ಗಂಟೆಗೆ ಕೋವಿಡ್-19 ನಿಯಂತ್ರಣದ ಕುರಿತು ಕೈಗೊಳ್ಳಲಾಗಿರುವ ಹಾಗೂ ಕೈಗೊಳ್ಳಬೇಕಾಗಿರುವ ಮುಂಜಾಗ್ರತಾ ಕ್ರಮಗಳ ಕುರಿತು ಜಿಲ್ಲೆಯ ಜನಪ್ರತಿನಿಧಿಗಳ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಜಿಲ್ಲಾಡಳಿತ ಭವನದ ತುಂಗಭದ್ರಾ ಸಭಾಂಗಣದಲ್ಲಿ ಸಭೆ ನಡೆಸುವರು. ಮಧ್ಯಾಹ್ನ 12.30 ಗಂಟೆಗೆ ನಗರದಿಂದ ಹೊರಟು ಹಿರಿಯೂರು ತೆರಳಿ ವಾಸ್ತವ್ಯ ಮಾಡುವರು.

ನಾಳೆ ಶನಿವಾರ ಬೆಳಿಗ್ಗೆ 10 ಗಂಟೆಗೆ ಹಿರಿಯೂರಿನಿಂದ ನಗರಕ್ಕಾಗಮಿಸುವ ಸಚಿವರು, ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 12.30 ರವರೆಗೆ ದಾವಣಗೆರೆ ಜಿಲ್ಲೆಯ ಜಿಲ್ಲಾ ಸರ್ಕಾರಿ ಆಸ್ಪತ್ರೆ, ಖಾಸಗಿ ಆಸ್ಪತ್ರೆ ಮತ್ತು ಕೋವಿಡ್ ಕೇರ್ ಸೆಂಟರ್‌ಗಳಿಗೆ ಭೇಟಿ ನೀಡಿ ಪರಿಶೀಲನೆ ಮಾಡುವರು.

# ಭಾರೀ ಮಳೆ: ಹರಿಹರ ತಾಲ್ಲೂಕಿನಲ್ಲಿ ಭತ್ತದ ಬೆಳೆಗೆ ಹಾನಿ

### ರೈತರಿಗೆ ಪರಿಹಾರ ನೀಡುವಂತೆ ಮಾಜಿ ಶಾಸಕ ಬಿ.ಪಿ. ಹರೀಶ್ ಮನವಿ

ಮಲೇಬೆನ್ನೂರು, ಮೇ 6- ನಿನ್ನೆ ರಾತ್ರಿ ಸುರಿದ ಭಾರೀ ಮಳೆಯಿಂದಾಗಿ ಹರಿಹರ ತಾಲ್ಲೂಕಿನ ಅನೇಕ ಗ್ರಾಮಗಳಲ್ಲಿ ಭತ್ತದ ಬೆಳೆ ನೆಲ ಕಚ್ಚಿದ್ದು, ಅಪಾರ ಹಾನಿಯಾಗಿದೆ ಎಂದು ವರದಿಯಾಗಿದೆ.

ಮಲೇಬೆನ್ನೂರು ಹೋಬಳಿಯ ಕುಣೆಬೆಳಕೆರೆ-08, ಗುಳದಹಳ್ಳಿ-50, ಮಲ್ಲನಾಯ್ಕನಹಳ್ಳಿ-50, ಹುಲುಗಿನ ಹೊಳೆ-25 ಮತ್ತು ಎಳೆಹೊಳೆಯಲ್ಲಿ 45 ಎಕರೆ ಸೇರಿ ಒಟ್ಟು 250 ಎಕರೆ ಭತ್ತದ ಬೆಳೆ ನೆಲಕಚ್ಚಿದೆ ಎಂದು ಉಪ ತಹಶೀಲ್ದಾರ್ ಆರ್. ರವಿ ಅವರು ಹರಳಹಳ್ಳಿ, ಗುಳದಹಳ್ಳಿಗೆ ಭೇಟಿ ನೀಡಿ, ಬೆಳೆಹಾನಿ ಪರಿಶೀಲಿಸಿದ ನಂತರ ಪತ್ರಕರ್ತರಿಗೆ ಮಾಹಿತಿ ನೀಡಿದರು.

ಕುಣೆಬೆಳಕೆರೆ ವೃತ್ತದ ಗ್ರಾಮ ಲೆಕ್ಕಾಧಿಕಾರಿ ದೇವರಾಜ್, ಎಳೆಹೊಳೆ ಗ್ರಾಮ ಲೆಕ್ಕಾಧಿಕಾರಿ ಮಂಜುಳಾ ಅವರು ಭತ್ತದ ಬೆಳೆ ನೆಲ ಕಚ್ಚಿರುವ ಕುರಿತು ಸ್ಥಳ ಪರಿಶೀಲಿಸಿ, ಮಾಹಿತಿ ನೀಡಿದ್ದಾರೆ ಎಂದು ರವಿ ತಿಳಿಸಿದರು. ಕೃಷಿ ಇಲಾಖೆಯ ಇನಾಯತ್, ಗ್ರಾಮಲೆಕ್ಕಾಧಿಕಾರಿ ಅಣ್ಣಪ್ಪ ಈ ವೇಳೆ ಹಾಜರಿದ್ದರು.



**ಹರೀಶ್ ಭೇಟಿ:** ಮಳೆಯಿಂದ ಬೆಳೆ ಹಾನಿಯಾಗಿರುವ ಕೆ. ಬೇವಿನಹಳ್ಳಿ, ಸತ್ಯನಾರಾಯಣ ಕ್ಯಾಂಪ್, ಸಾಲಕಟ್ಟೆ ಮತ್ತಿತರೆ ಗ್ರಾಮಗಳಿಗೆ ಗುರುವಾರ ಬೆಳಿಗ್ಗೆ ಮಾಜಿ ಶಾಸಕ ಬಿ.ಪಿ. ಹರೀಶ್ ಭೇಟಿ ನೀಡಿ, ರೈತರ ಕಷ್ಟ ಆಲಿಸಿದರು.

ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ, ಸಹಾಯಕ ಕೃಷಿ ನಿರ್ದೇಶಕ ಗೋವರ್ಧನ್ ಅವರಿಗೆ ದೂರವಾಣಿ ಮೂಲಕ ಮಾತನಾಡಿದ ಹರೀಶ್, ಮಳೆಯಿಂದಾಗಿ ಹರಿಹರ ತಾಲ್ಲೂಕಿನಲ್ಲಿ ಭತ್ತದ ಬೆಳೆ ನೆಲಕಚ್ಚಿ ರೈತರಿಗೆ ನಷ್ಟವಾಗಿದೆ. ಈ ಬಗ್ಗೆ ಸ್ಥಳ ಪರಿಶೀಲನೆ ಮಾಡಿ ಬೆಳೆಹಾನಿ ಬಗ್ಗೆ ಜಿಲ್ಲಾಡಳಿತಕ್ಕೆ ವರದಿ ನೀಡಿ ಪರಿಹಾರ ನೀಡುವಂತೆ ಮನವಿ ಮಾಡಲಾಗುವುದು. ಈ ಕುರಿತು ಡಿಸಿ ಅವರ ಬಳಿ ಮಾತನಾಡುವುದಾಗಿ ತಿಳಿಸಿದರು.

### ಆಸ್ತಿ ತೆರಿಗೆ ಪಾವತಿ ಅವಧಿ ವಿಸ್ತರಣೆ

ದಾವಣಗೆರೆ, ಮೇ 6- ಮಹಾನಗರಪಾಲಿಕೆ ವ್ಯಾಪ್ತಿಯ ಆಸ್ತಿಗಳ ಮೇಲಿನ ಸ್ವಯಂ ಘೋಷಿತ ಆಸ್ತಿ ತೆರಿಗೆಯನ್ನು ಪಾವತಿಸಲು ಶೇ.5 ರಷ್ಟು ರಿಯಾಯಿತಿ ಯ ಕಾಲಾವಧಿಯನ್ನು ಏಪ್ರಿಲ್ ಮಾಹೆಯ ಅಂತ್ಯದವರೆಗೆ ಮಾತ್ರ ಸೀಮಿತಗೊಳಿಸಲಾಗಿತ್ತು. ಆದರೆ, ಕೋವಿಡ್-19 ಸಾಂಕ್ರಾಮಿಕ ರೋಗದ 2ನೇ ಅಲೆ ಯು ಅತಿ ತೀವ್ರವಾಗಿ ಹರಡುತ್ತಿದ್ದು, ನಿಯಂತ್ರಣಕ್ಕಾಗಿ ಸಾಮಾಜಿಕ ಅಂತರ ಮತ್ತು ಪ್ರತ್ಯೇಕತೆಯನ್ನು ಕಟ್ಟುನಿಟ್ಟಾಗಿ ಕಾಯ್ದುಕೊಳ್ಳಬೇಕಾಗಿರುತ್ತದೆ. ಆದ್ದರಿಂದ ಆಸ್ತಿ ತೆರಿಗೆ ಮೇಲಿನ ಶೇ.5 ರಿಯಾಯಿತಿಯನ್ನು ಸರ್ಕಾರದ ಆದೇಶದಂತೆ ಜೂನ್ 30 ರವರೆಗೆ ವಿಸ್ತರಿಸಲಾಗಿದೆ ಎಂದು ಪಾಲಿಕೆ ಆಯುಕ್ತ ವಿಶ್ವನಾಥ ಮುದಜ್ಜಿ ತಿಳಿಸಿದ್ದಾರೆ.

## ಕೊರೊನಾ ಲಸಿಕೆ ವಿತರಣೆಯು ಬೂತ್ ಮಟ್ಟದಲ್ಲಿ ನಡೆಯುಲಿ



ದಾವಣಗೆರೆ,ಮೇ 6- ಕೊರೊನಾ ಲಸಿಕೆ ವಿತರಣೆಯು ಬೂತ್ ಮಟ್ಟದಲ್ಲಿ ನಡೆಯುವಂತಾಗಲಿ ಎಂದು ಸಲಹೆ ನೀಡಿರುವ ಮಹಾನಗರ ಪಾಲಿಕೆ ಮಾಜಿ ಸದಸ್ಯ ಶಿವನಳ್ಳಿ ರಮೇಶ್, ಇದರಿಂದ ವಿತರಣೆಯಲ್ಲಾಗುತ್ತಿರುವ ಗೊಂದಲವನ್ನು ನಿವಾರಿಸಬಹುದು ಎಂದು ಅಭಿಪ್ರಾಯಪಟ್ಟಿದ್ದಾರೆ.

ಕೊರೊನಾ ಸೋಂಕು ಹೆಚ್ಚುತ್ತಿರುವ ನಡುವೆಯೂ ಜನರು ಅದರಲ್ಲೂ ವಯೋವೃದ್ಧರು ದೊಡ್ಡ ಸಂಖ್ಯೆಯಲ್ಲಿ ಲಸಿಕಾ ಕೇಂದ್ರಗಳ ಎದುರು ಜಮಾಯಿಸುತ್ತಿರುವ ಹಿನ್ನೆಲೆಯಲ್ಲಿ ಜನತಾವಾಣಿಯೊಂದಿಗೆ ಮಾತನಾಡಿದ ಅವರು, ಲಸಿಕೆ ವಿತರಣೆ ಸುಗಮವಾಗಿ ನಡೆಯಬೇಕಾದರೆ ಬೂತ್ ಮಟ್ಟದ ವಿತರಣೆಯೊಂದೇ ಮಾರ್ಗ ಎಂದು ಹೇಳಿದ್ದಾರೆ.

ಮಹಾನಗರ ಪಾಲಿಕೆಯು ಎಲ್ಲಾ 45 ವಾರ್ಡುಗಳಲ್ಲಿರುವ ಆರೋಗ್ಯ ವಿಭಾಗದ ನಿರೀಕ್ಷಕರ ಮೂಲಕ ಆಯಾ ವಾರ್ಡುಗಳ ಜನರಿಗೆ ಪ್ರತಿದಿನ ನಿಗದಿಪಡಿಸುವ ಲಸಿಕೆ ವಿತರಣೆಯ ಟೋಕನ್ ಗಳನ್ನು ಲಸಿಕೆ ಹಾಕುವ ಹಿಂದಿನ ದಿನ ವಿತರಿಸಿದ್ದಲ್ಲಿ ಯಾವುದೇ ಗೊಂದಲ - ರಶ್ ಇಲ್ಲದಂತೆ ಎಲ್ಲರಿಗೂ ಲಸಿಕೆ ಸಿಗಲು ಸಾಧ್ಯ ಎಂದು ಅವರು ತಿಳಿಸಿದ್ದಾರೆ.

ನಗರ ಪಾಲಿಕೆ ವ್ಯಾಪ್ತಿಯಲ್ಲಿ ಸುಮಾರು 400 ಕ್ಕೂ ಹೆಚ್ಚು ಸಾರ್ವತ್ರಿಕ ಚುನಾವಣೆಯಲ್ಲಿ ಮತದಾನ ಮಾಡುವ ಬೂತ್ ಗಳಿದ್ದು, ಈ ಬೂತ್ ಗಳಲ್ಲಿ ಲಸಿಕೆ ವಿತರಣಾ ಕೇಂದ್ರಗಳನ್ನು ಸ್ಥಾಪಿಸಿದ್ದಲ್ಲಿ ಯಾವುದೇ ಸಮಸ್ಯೆಗಳಿಲ್ಲದಂತೆ ಲಸಿಕೆ ಎಲ್ಲಾ ಜನರನ್ನು ತಲುಪುತ್ತದೆ ಎಂದು ಶಿವನಳ್ಳಿ ರಮೇಶ್ ಹೇಳಿದ್ದಾರೆ.

# ಗುಜರಾತ್ : ಸರ್ಕಾರಿ ಸಾವು ಕಡಿಮೆ, ಪತ್ರಿಕೆಗಳ ತುಂಬಾ ಶ್ರದ್ಧಾಂಜಲಿಗಳು

### ಗುಜರಾತ್‌ನ ಸೌರಾಷ್ಟ್ರ ಭಾಸ್ಕರ ಪತ್ರಿಕೆಯಲ್ಲಿ ಗುರುವಾರ 238 ಶ್ರದ್ಧಾಂಜಲಿಗಳು ಪ್ರಕಟ

ಅಹಮದಾಬಾದ್, ಮೇ 6 - ಗುಜರಾತ್‌ನಲ್ಲಿ ಕೊರೊನಾ ಪ್ರಕೋಪವನ್ನು ಅಳೆಯಲು ಇರುವ ಒಂದು ಉತ್ತಮ ಸಾಧನ ಎಂದರೆ, ಅಲ್ಲಿನ ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿರುವ ನಿಧನ ವಾರ್ತೆಗಳು ಎಂಬ ವಾದ ಮುಂದಿಡಲಾಗುತ್ತಿದೆ.

ಪ್ರತಿದಿನ ಅಲ್ಲಿನ ಪತ್ರಿಕೆಗಳಲ್ಲಿ ನಿಧನ ವಾರ್ತೆಗಳು ಹಾಗೂ ಶ್ರದ್ಧಾಂಜಲಿಗಳ ಪುಟಗಳ ಸಂಖ್ಯೆ ಬೆಳೆಯುತ್ತಲೇ ಇದೆ. ಕಳೆದ ಗುರುವಾರದಂದು ಭಾವ ನಗರದ ಸೌರಾಷ್ಟ್ರ ಭಾಸ್ಕರ್ ಪತ್ರಿಕೆಯ 16 ಪುಟಗಳಲ್ಲಿ ಅರ್ಧದಷ್ಟು ಕೇವಲ ಶ್ರದ್ಧಾಂಜಲಿಗಳೇ ಇದ್ದವು.

ನಾನಾ ಕಾರಣಗಳಿಗಾಗಿ ಸಾವಿನ ಸಂಖ್ಯೆಯನ್ನು ಸರ್ಕಾರ ಕಡಿಮೆ ಹೇಳುತ್ತಿದೆ ಎಂಬ ಆರೋಪಗಳ ನಡುವೆಯೇ ಈ ಬೆಳವಣಿಗೆಯಾಗಿದೆ.

ಗುಜರಾತ್‌ನ ಜನಪ್ರಿಯ ಪತ್ರಿಕೆಗಳಲ್ಲಿ ಒಂದಾದ ಸೌರಾಷ್ಟ್ರ ಭಾಸ್ಕರದಲ್ಲಿ ಗುರುವಾರ 238 ಶ್ರದ್ಧಾಂಜಲಿಗಳು ಪ್ರಕಟವಾಗಿದ್ದವು. ಎರಡು ತಿಂಗಳ ಹಿಂದೆ ಮಾರ್ಚ್ 6ರಂದು ಈ ಸಂಖ್ಯೆ ಕೇವಲ 28 ಆಗಿತ್ತು.

ಗುಜರಾತ್‌ನ ಇತರೆ ಪ್ರಮುಖ ಪತ್ರಿಕೆಗಳಾದ 'ಸಂದೇಶ್' ಹಾಗೂ ಗುಜರಾತ್ 'ಸಮಾಚಾರ್' ಗಳಲ್ಲೂ ಇದೇ ರೀತಿಯ ಏರಿಕೆಯಾಗಿದೆ. ಕೊರೊನಾದಿಂದ ಸಂಭವಿಸುತ್ತಿರುವ ಸಾವುಗಳನ್ನು ಮುಚ್ಚಿಡಲು ಸರ್ಕಾರ ಪ್ರಯತ್ನ ನಡೆಸಿದೆ ಎಂದು ಪ್ರತಿಪಕ್ಷವಾದ ಕಾಂಗ್ರೆಸ್ ಆರೋಪಿಸಿದೆ.

ವಿಜಯ್ ರುಪಾನಿ ನೇತೃತ್ವದ ಸರ್ಕಾರ ಕೊರೊನಾ ಸಾವುಗಳ ಸಂಖ್ಯೆಯನ್ನು ಮುಚ್ಚಿಡುತ್ತಿದೆ ಎಂದು ಕಾಂಗ್ರೆಸ್ ವಕ್ತಾರ ಮನೀಶ್ ದೋಷಿ ಹೇಳಿದ್ದಾರೆ.

ಆರೋಪ ತಳ್ಳಿ ಹಾಕಿರುವ ರಾಜ್ಯ ಸರ್ಕಾರ, ಕೊರೊನಾ ಸೋಂಕಿತರಿಗೆ ಸಹ ಅಸ್ವಸ್ಥತೆ ಇದ್ದರೆ ಅದನ್ನು ವೈರಲ್ ಸಾವು ಎಂದು ಪರಿಗಣಿಸಲಾಗದು. ಐ.ಸಿ.ಎಂ.ಆರ್. ಮಾರ್ಗಸೂಚಿಗಳ ಪ್ರಕಾರ ಸಾವುಗಳನ್ನು ವರ್ಗೀಕರಿಸಲಾಗುತ್ತಿದೆ ಎಂದು ತಿಳಿಸಿದೆ.

ಬುಧವಾರ ಸರ್ಕಾರ ಬಿಡುಗಡೆ ಮಾಡಿದ ಪ್ರಕಟಣೆಯ ಪ್ರಕಾರ, ಕೊರೊನಾದಿಂದ ರಾಜ್ಯದಲ್ಲಿ 133 ಸಾವುಗಳು ಸಂಭವಿಸಿವೆ. ಆದರೆ, ಗುಜರಾತಿನ ಪ್ರಮುಖ ಪತ್ರಿಕೆಗಳಾದ 'ಗುಜರಾತ್ ಸಮಾಚಾರ'ದಲ್ಲಿ ಗುರುವಾರ 85 ಹಾಗೂ 'ಸಂದೇಶ್'ನಲ್ಲಿ 56 ಸಾವುಗಳ ವರದಿಯಾಗಿದೆ. ಈ ಬಗ್ಗೆ ಹೇಳಿಕೆ ನೀಡಿರುವ ಮುಖ್ಯಮಂತ್ರಿ ವಿಜಯ್ ರುಪಾನಿ, ಐ.ಸಿ.ಎಂ.ಆರ್. ಮಾರ್ಗಸೂಚಿಗಳ ಪ್ರಕಾರ, ಮೃತಪಟ್ಟವರಿಗೆ ಸಹ ಅಸ್ವಸ್ಥತೆ ಇದ್ದರೆ ಆ ಪ್ರಕರಣಗಳನ್ನು ಪರಿಣಿತರ ಸಮಿತಿಗೆ ವಹಿಸಲಾಗುತ್ತದೆ. ಸಮಿತಿಯು ಸಾವಿಗೆ ಪ್ರಾಥಮಿಕ ಕಾರಣ ತಿಳಿಸುತ್ತದೆ ಎಂದು ಹೇಳಿದ್ದಾರೆ.

ರೋಗಿಯ ಸಾವಿಗೆ ಹೃದಯಾಘಾತವೇ ಪ್ರಮುಖ ಕಾರಣ ಎಂದು ಸಮಿತಿ ತಿಳಿಸಿದರೆ ಅದನ್ನು ಕೊರೊನಾ ವೈರಸ್ ಸಾವು ಎಂದು ಪರಿಗಣಿಸುವುದಿಲ್ಲ. ದೇಶಾದ್ಯಂತ ಇದೇ ಪದ್ಧತಿ ಇದೆ ಎಂದವರು ಹೇಳಿಕೊಂಡಿದ್ದಾರೆ.

**ರಂಜಾನ್ ರೋಜಾ ಸಮಯ**

**ದಿನಾಂಕ : 07.05.2021, ಇಫ್ತೇಯಾರಿ ಸಮಯ : 6-50**
**ದಿನಾಂಕ 08.05.2021, ಸಹೇರಿ ಸಮಯ : 4-43**


|| ಶ್ರೀ ಕಲ್ಲೇಶ್ವರ ಪ್ರಸನ್ನ ||

**ಕೈಲಾಸ ಶಿವಗಣಾರಾಧನೆ ಆಹ್ವಾನ**



ದಾವಣಗೆರೆ ತರಳಬಾಳು ಬಡಾವಣೆ ವಾಸಿ
ದಿ|| ಶ್ರೀ ಬಿ. ರುದ್ರಪ್ಪನವರು
ನಿ. ಉಪನ್ಯಾಸಕರು, ದಾವಣಗೆರೆ ಇವರ ಮಗನಾದ
ಶ್ರೀಮತಿ ಚಂದ್ರಕಲಾ ಶ್ರೀ ದಯಾನಂದ್ ಆರ್.ಬಿ.
ಇವರು ಮಾಡುವ ವಿಜ್ಞಾಪನೆಗಳು.
ಶರಣ/ಶರಣೆಯರೇ,
ದಿನಾಂಕ : 03.05.2021ನೇ ಸೋಮವಾರ ಬೆಳಿಗ್ಗೆ 5.20ಕ್ಕೆ ನನ್ನ ಮಾತೃಶ್ರೀಯವರಾದ
**ಶ್ರೀಮತಿ ಜಯಶೀಲಮ್ಮನವರು**
(ದಿ|| ಬಿ. ರುದ್ರಪ್ಪ, ನಿವೃತ್ತ ಉಪನ್ಯಾಸಕರು, ಇವರ ಧರ್ಮಪತ್ನಿ ದಾವಣಗೆರೆ. )
ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**"ಕೈಲಾಸ ಶಿವಗಣಾರಾಧನೆ"ಯನ್ನು**
ತಾ|| 07.05.2021ನೇ ಶುಕ್ರವಾರ ಬೆಳಿಗ್ಗೆ 10.00ಕ್ಕೆ ಮೃತರ ಸ್ವಗೃಹ ಹಿರೇತೊಗಲೇರಿಯಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು : ಶ್ರೀಮತಿ ದಿ|| ಚನ್ನಮ್ಮ, ದಿ|| ಬಿ. ಕಲ್ಲಪ್ಪ ಮತ್ತು ಮಕ್ಕಳು, ಹಿರೇತೊಗಲೇರಿ.
ಶ್ರೀಮತಿ ಕಮಲಮ್ಮ, ಶ್ರೀ ಬಿ. ವಾಮದೇವಪ್ಪ ಮತ್ತು ಮಕ್ಕಳು, ದಾವಣಗೆರೆ.
ಶ್ರೀಮತಿ ಸುಮ ಶ್ರೀ ಕೆ.ಜಿ. ಸಿದ್ದಲಿಂಗಪ್ಪ ಮತ್ತು ಮಕ್ಕಳು, ಕೊಂಡಜ್ಜಿ.
ಶ್ರೀಮತಿ ನಿರ್ಮಲ ಶ್ರೀ ಆರ್. ನಂಜುಂಡಪ್ಪ ಮತ್ತು ಮಕ್ಕಳು, ಇಟ್ಟಿಗೆಹಳ್ಳಿ.
ದಿ|| ಸಣ್ಣಕೋಡಿಹಳ್ಳಿ ಹನುಮಪ್ಪ ಮತ್ತು ಮಕ್ಕಳು, ಕೆಂಚಮ್ಮನಹಳ್ಳಿ,
ಹಿರೇತೊಗಲೇರಿ. ಗ್ರಾಮಸ್ಥರು ಹಾಗೂ ಬಂಧು-ಮಿತ್ರರು.



**ಭಾವಪೂರ್ಣ ಶ್ರದ್ಧಾಂಜಲಿ**



ರಾಣೇಬೆನ್ನೂರು, ಪಿ.ಬಿ. ರಸ್ತೆ, ಗ್ರಾಮೀಣ ಪೊಲೀಸ್ ಠಾಣೆ ಎದುರು ವಾಸಿಯಾದ
**ಶ್ರೀಮತಿ ಶೈಲಾ ಜಯರಾಜ್ ಹಲಿಹರದ**
(50 ವರ್ಷ) ಇವರು, ದಿನಾಂಕ : 5.5.2021ರ ಬುಧವಾರ ದಂದು ನಿಧನರಾದರು ಎಂದು ತಿಳಿಸಲು ವಿಷಾದಿಸುತ್ತೇವೆ.
ದಿ|| ಶೈಲಾ ಜಯರಾಜ್ ಅವರಿಗೆ ನಮ್ಮೆಲ್ಲರ ಭಾವಪೂರ್ಣ ಶ್ರದ್ಧಾಂಜಲಿ.
ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲೆಂದು ಪ್ರಾರ್ಥಿಸುತ್ತಾ, ಶ್ರದ್ಧಾಂಜಲಿ ಅರ್ಪಿಸುತ್ತೇವೆ.
✧ ಶಿವಶಂಕರ್ ಹೆಚ್.ಎಂ. ✧ ನಾಗರಾಜ್ ಹೆಚ್.ಎಂ.
✧ ಶ್ರೀ ಶೈಲ ಚೌಗಲ, CPI,
**ಹಲಿಹರದ ಮುಲಿಗೆಪ್ಪ ಕಿರಾಣಿ ಮರ್ಚೆಂಟ್ಸ್**
**ಹಲಿಹರದ ಮುಲಿಗೆಪ್ಪ ಹಾರ್ಡ್‌ವೇರ್ಸ್ & ಪೇಂಟ್ಸ್**
ಸಿಬ್ಬಂದಿ ವರ್ಗ, ಗಡಿಯಾರದ ಕಂಬದ ಹತ್ತಿರ, ದಾವಣಗೆರೆ.


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte